**ಕರ್ನಾಟಕ ಸರ್ಕಾರ**

ಸಂಖ್ಯೆ: ಆರ್.ಡಿ.ಪಿ.ಆರ್./88/ಜಿಪಿಎ/2022

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 04.08.2022.

**ಸುತ್ತೋಲೆ**

**ವಿಷಯ:** ಗ್ರಾಮ ಪಂಚಾಯಿತಿಗಳು ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನವನ್ನು ಅನುಷ್ಠಾನಗೊಳಿಸುವ ಬಗ್ಗೆ.- ಮಾರ್ಗಸೂಚಿಗಳು.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ.ಪಿ.ಆರ್.88/ಜಿಪಿಎ/2022 ದಿನಾಂಕ 07-04-2022.

***

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕವಾಗಿ ಹರಡುತ್ತಿದ್ದ ಕೋವಿಡ್-19ರ ಸೋಂಕಿನ ನಿಯಂತ್ರಣಕ್ಕಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕೋವಿಡ್ ಕಾರ್ಯಪಡೆಗಳನ್ನು ರಚಿಸಲಾಯಿತು. ಜೊತೆಯಲ್ಲಿ 50 ಮನೆಗಳ ಉಸ್ತುವಾರಿಗಾಗಿ ಕುಟುಂಬ ಕಾರ್ಯಪಡೆಗಳನ್ನು ಸಹ ರಚಿಸಲಾಯಿತು.

ಕೋವಿಡ್-19ರ 2ನೇ ಅಲೆಯ ಸಂದರ್ಭದಲ್ಲಿ ಕಾರ್ಯಪಡೆಗಳು ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಿದವು. ಆ ಸಂದರ್ಭದಲ್ಲಿ ಪ್ರತ್ಯೇಕವಾಗಿ ಮನೆಯಲ್ಲಿರುವ ರೋಗಿಗಳ (home isolated patients) ಸಂಖ್ಯೆಯೂ ಸಾಕಷ್ಟಿತ್ತು. ರಾಜ್ಯದಲ್ಲಿ ಕೋವಿಡ್ ಸಾಂಕ್ರಾಮಿಕ ರೋಗಕ್ಕೆ ಬಲಿಯಾದ ಹೆಚ್ಚಿನ ರೋಗಿಗಳು ಸಹ ಅಸ್ವಸ್ಥತೆಗಳನ್ನು (ರಕ್ತದೊತ್ತಡ, ಸಕ್ಕರೆ ಖಾಯಿಲೆಗಳು, ಹಾಗೂ ಹೃದಯರೋಗ, ಇತ್ಯಾದಿ) ಹೊಂದಿದ್ದಾರೆಂದು ವರದಿಯಾಗಿರುತ್ತದೆ. ನಿಯಮಿತ ತಾಪಮಾನ ಪರಿಶೀಲನೆ ಮತ್ತು ಆಮ್ಲಜನಕದ ಶುದ್ಧತ್ವದ ಮಾಪನದ ಜೊತೆಗೆ, ಸಹ-ಅಸ್ವಸ್ಥತೆ ಹೊಂದಿರುವ ಕೋವಿಡ್ ರೋಗಿಗಳಿಗೆ ರಕ್ತದೊತ್ತಡ, ರಕ್ತದಲ್ಲಿನ ಗ್ಲೂಕೋಸ್, ಹಿಮೋಗ್ಲೋಬಿನ್, ಬಿಎಂಐ ಮುಂತಾದ ಹೆಚ್ಚುವರಿ ಪರೀಕ್ಷೆಗಳು ಅಗತ್ಯವಾಗಿರುತ್ತವೆ. ಈ ಪರೀಕ್ಷೆಗಳನ್ನು ಮನೆಯ ಪ್ರತ್ಯೇಕತೆಯ ಅವಧಿಯಲ್ಲಿ ಮಾತ್ರವಲ್ಲದೆ ಚೇತರಿಕೆಯ ಸಮಯದಲ್ಲಿಯೂ ಮೇಲ್ವಿಚಾರಣೆ ಮಾಡಬೇಕಾಗುತ್ತದೆ. ಈ ಕಾರ್ಯವನ್ನು ನಿರ್ವಹಿಸಲು, ಕಾರ್ಯಪಡೆಯು ಪ್ರಮುಖ ಉಪಕರಣಗಳು ಮತ್ತು ಉಪಭೋಗ್ಯ ವಸ್ತುಗಳನ್ನು (Consumable Materials) ಒಳಗೊಂಡಿರುವ ಕೋವಿಡ್ ನಿರ್ವಹಣಾ ಕಿಟ್‌ಅನ್ನು ಪಂಚಾಯಿತಿಗಳು ಹೊಂದಿರಬೇಕಾಗುತ್ತದೆ ಎಂಬುದನ್ನು ಗಮನಿಸಲಾಗಿರುತ್ತದೆ. ಸೋಂಕಿನ ನಿರ್ವಹಣೆಯ ನಂತರ ಮುಂಬರುವ ದಿನಗಳಲ್ಲಿ ಆರೋಗ್ಯ

ಕ್ಷೇತ್ರದಲ್ಲಿ ಗ್ರಾಮಪಂಚಾಯಿತಿಗಳು ಹೆಚ್ಚು ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಸಮುದಾಯ ಶಕ್ತಿಯ ಬೆಂಬಲವನ್ನು ಮೇಳೈಸಬೇಕು; ವಿವಿಧ ಕಾರಣಗಳಿಂದ ಆರೋಗ್ಯ ಸೇವೆಗಳಿಂದ ವಂಚಿತರಾದ ಕಟ್ಟಕಡೆಯ ಸಮುದಾಯಕ್ಕೂ ಸೇವೆಗಳು ತಲುಪಬೇಕು; ಗುಣಮಟ್ಟದ ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳು ಕೈಗೆಟುಕುವಂತಾಗಬೇಕು ಎಂಬ ಉದ್ದೇಶದಿಂದ ಗ್ರಾಮ ಪಂಚಾಯಿತಿ ಕಾರ್ಯಪಡೆಗಳನ್ನು ಇನ್ನಷ್ಟು ಬಲಪಡಿಸುವ ಪ್ರಯತ್ನಗಳನ್ನು ಕೈಗೊಳ್ಳಲಾಯಿತು.

ಸಾರ್ವಜನಿಕ ಆರೋಗ್ಯ ಕ್ಷೇತ್ರದ ನಿರ್ವಹಣೆಗೆ ಇತರೆ ಇಲಾಖೆಗಳ ಸಹಕಾರ ಮತ್ತು ಸಂಘ ಸಂಸ್ಥೆಗಳೊಂದಿಗಿನ ಸಮನ್ವಯತೆ ಬಹುಮುಖ್ಯವಾಗಿರುತ್ತದೆ. ಮೇಲಿನ ಎಲ್ಲಾ ಉದ್ದೇಶಗಳನ್ನು ಈಡೇರಿಸುವ ನಿಟ್ಟಿನಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳು ಜೊತೆಗೂಡಿ ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್ (KHPT) ಸಹಯೋಗದೊಂದಿಗೆ **"ಗ್ರಾಮ ಪಂಚಾಯತ್ ಆರೋಗ್ಯ ಅಮೃತ ಅಭಿಯಾನ"**ವನ್ನು ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಕರ್ನಾಟಕದಲ್ಲಿ ಜಾರಿಗೊಳಿಸಲಾಯಿತು. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ರಾಜ್ಯದ 14 ಜಿಲ್ಲೆಗಳ 2816 ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಪಂಚಾಯಿತಿ ಆರೋಗ್ಯ ಅಭಿಯಾನವನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ಕೈಗೆತ್ತಿಕೊಳ್ಳಲಾಯಿತು. ಅಭಿಯಾನವನ್ನು ಬಾಗಲಕೋಟೆ, ಬಳ್ಳಾರಿ, ವಿಜಯನಗರ, ಬೆಳಗಾವಿ, ಗದಗ, ಚಾಮರಾಜನಗರ ದಾವಣಗೆರೆ, ಕಲ್ಬುರ್ಗಿ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ವಿಜಯಪುರ ಮತ್ತು ಯಾದಗಿರಿ ಸೇರಿದಂತೆ 14 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಆರೋಗ್ಯ ಅಮೃತ ಅಭಿಯಾನವು ಒಂದು ಪರಿಣಾಮಕಾರಿ ಮಾದರಿಯಾಗಿದ್ದು, ಕೋವಿಡ್ ಮಾತ್ರವಲ್ಲ ಕ್ಷಯಮುಕ್ತ ಗ್ರಾಮಗಳನ್ನು ಸಾಧಿಸಲು ಮತ್ತು ಅಸಾಂಕ್ರಾಮಿಕ ರೋಗಗಳಪತ್ತೆ ಮತ್ತು ನಿರ್ವಹಣೆ, ಲಸಿಕಾ ಆಂದೋಲನ, ಬಾಲ್ಯವಿವಾಹ ವಿರೋಧಿ ಆಂದೋಲನಗಳಂತಹ ಕಾರ್ಯಕ್ರಮಗಳನ್ನು ಅಭಿಯಾನದ ಮೂಲಕ ಕೈಗೊಳ್ಳುತ್ತಿದ್ದು ಗ್ರಾಮ ಪಂಚಾಯತಿಗಳು ಶ್ರಮಿಸುತ್ತಿವೆ.

ಗ್ರಾಮ ಪಂಚಾಯಿತಿ ಎಲ್ಲರಿಗೂ ಆರೋಗ್ಯ ಒದಗಿಸುವ ಮಹದುದ್ದೇಶವನ್ನು ಸಾಧಿಸಲು ಸಮರ್ಥ ಸ್ವಯಂ ಸರ್ಕಾರದ ಸ್ಥಳೀಯ ಸಂಸ್ಥೆ. ಗ್ರಾಮೀಣ ಜನತೆಯಲ್ಲಿ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವ ಹಾಗೂ ಸ್ಥಳೀಯವಾಗಿ ದೊರಕುವಂತಹ ಸೇವೆಗಳನ್ನು ಬಳಸಿಕೊಳ್ಳುವ ಬಗ್ಗೆ ಅರಿವು ಮೂಡಿಸುವುದು; ಎಲ್ಲದಕ್ಕಿಂತ ಹೆಚ್ಚಾಗಿ ಗ್ರಾಮ ಪಂಚಾಯಿತಿಯ ನಾಯಕತ್ವದಲ್ಲಿ ದುರ್ಬಲ ವರ್ಗಗಳ – ಪರಿಶಿಷ್ಟಜಾತಿ / ಪರಿಶಿಷ್ಟ ಪಂಗಡದ ಸಮುದಾಯ, ದಿನಗೂಲಿ

ಕಾರ್ಮಿಕರು, ಗಣಿಕಾರ್ಮಿಕರು, ವಲಸೆ ಕುಟುಂಬಗಳು, ವಿಶೇಷ ಚೇತನರು, ಹಿರಿಯ ನಾಗರೀಕರು, ಕಠಿಣ ಪರಿಸ್ಥಿತಿಯಲ್ಲಿರುವ ಗರ್ಭಿಣಿಯರು ಮತ್ತು ಬಾಣಂತಿಯರು, ದಮನಿತ ಮಹಿಳೆಯರು, ಲಿಂಗತ್ವ ಅಲ್ಪಸಂಖ್ಯಾತರ, ಹೆಚ್‌ಐವಿ / ಕ್ಷಯಬಾಧಿತ ಜನರ ಮನೆ ಬಾಗಿಲಿಗೆ ಆರೋಗ್ಯ ಸೇವೆಗಳನ್ನು ಗ್ರಾಮ ಪಂಚಾಯತ್ ಆರೋಗ್ಯ ಅಮೃತ ಅಭಿಯಾನವು ತೆಗೆದುಕೊಂಡು ಹೋಗಿದೆ. ಬಾಕಿ ಉಳಿದ 3146 ಗ್ರಾಮ ಪಂಚಾಯಿತಿಗಳಿಗೆ ವಿಸ್ತರಿಸಲು 2022-23 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಣೆಮಾಡಿದ್ದು, ಉಲ್ಲೇಖಿತ ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕಳೆದ ಸಾಲಿನಲ್ಲಿ ಪ್ರಾರಂಭಿಸಲಾದ 14 ಜಿಲ್ಲೆಗಳು ಹಾಗೂ ಪ್ರಸಕ್ತ ಸಾಲಿನಲ್ಲಿ ಉಳಿದ 17 ಜಿಲ್ಲೆಗಳು ಸೇರಿದಂತೆ 31 ಜಿಲ್ಲೆಗಳ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನವನ್ನು ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಮಾರ್ಗಸೂಚಿಯನ್ನು ನೀಡಲಾಗಿದೆ.

1. **ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನದ ಉದ್ದೇಶ:** ಗ್ರಾಮೀಣ ಪ್ರದೇಶದ ಪ್ರತಿ ಬಡ ಕುಟುಂಬದ ಮೂಲಭೂತ ಪರೀಕ್ಷೆ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸುವುದರ ಮೂಲಕ ಸಮುದಾಯಗಳನ್ನು ತಲುಪುವುದು. ಗ್ರಾಮೀಣ ಜನತೆಯಲ್ಲಿ ಇರುವಂತಹ ಜೀವನ ಶೈಲಿ ಆಧಾರಿತ ಅಸಾಂಕ್ರಾಮಿಕ ರೋಗಗಳ (Non – Communicable disease), ಪ್ರಾಥಮಿಕ ರೋಗ ಪತ್ತೆ ಹಚ್ಚುವಿಕೆ (Health Screening) ಮಾಡುವುದು ಆಗಿರುತ್ತದೆ.

   ಈ ರೀತಿಯ Health Screening ಅನ್ನುಗ್ರಾಮ ಪಂಚಾಯಿತಿ ಸಹಯೋಗದೊಂದಿಗೆ ಸ್ಥಳೀಯ ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಸಮುದಾಯ ಆರೋಗ್ಯ ಅಧಿಕಾರಿ, ಆಶಾ ಮೇಲ್ವಿಚಾರಕರು, ಆಶಾ ಕಾರ್ಯಕರ್ತೆಯರುಗಳ ಮೂಲಕ ಕೈಗೊಳ್ಳುವುದು. ರೋಗ ಲಕ್ಷಣಗಳು ಇರುವಂತಹ ನಾಗರೀಕರಿಗೆ ಹೆಚ್ಚಿನ ತಪಾಸಣೆ ಮತ್ತು ಆರೋಗ್ಯ ಸೇವೆಗಳಿಗಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ, ತಾಲ್ಲೂಕು ಅಥವಾ ಜಿಲ್ಲಾ ಆರೋಗ್ಯ ಕೇಂದ್ರಕ್ಕೆ ಕಳುಹಿಸುವ ರೆಫೆರಲ್ ಸೇವೆ (referral) ವ್ಯವಸ್ಥೆ ಮಾಡುವುದು.

2. **ಅಭಿಯಾನ ಅನುಷ್ಠಾನಗೊಳಿಸಲಾಗುವ ಜಿಲ್ಲೆಗಳು:** ರಾಜ್ಯದ 31 ಜಿಲ್ಲೆಗಳ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮಪಂಚಾಯಿತಿ ಆರೋಗ್ಯ ಅಮೃತ ಅಭಿಯಾನವನ್ನು ಅನುಷ್ಠಾನಗೊಳಿಸುವುದು.

### 3. ಅಭಿಯಾನದ ಪ್ರಮುಖ ಕಾರ್ಯಚಟುವಟಿಕೆಗಳು:

1. ಅಸಾಂಕ್ರಾಮಿಕ ರೋಗಗಳ ಸ್ಕ್ರೀನಿಂಗ್(Non –Communicable disease Screening)
2. ಟಿ.ಬಿ. Screening
3. ಅಪೌಷ್ಟಿಕತೆ
4. ರಕ್ತಹೀನತೆ
5. ಮಾನಸಿಕ ಆರೋಗ್ಯಕ್ಕೆ ಬೆಂಬಲ
6. ಹದಿಹರೆಯದವರ ಸಮಸ್ಯೆಗಳು, ಬಾಲ್ಯವಿವಾಹ ತಡೆ ಹಾಗೂ ಮಕ್ಕಳು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ತಡೆ ಕುರಿತು ಅರಿವು ಮೂಡಿಸುವುದು.

**3.1.ಆರೋಗ್ಯಕಿಟ್:** ಅಸಾಂಕ್ರಾಮಿಕ ರೋಗಗಳ ಮತ್ತು ಟಿ.ಬಿ.ಪರೀಕ್ಷೆಗಾಗಿ, ಅಪೌಷ್ಟಿಕತೆ ಮತ್ತು ರಕ್ತಹೀನತೆ ಪತ್ತೆ ಹಚ್ಚಲು ಪ್ರತಿ ಗ್ರಾಮ ಪಂಚಾಯಿತಿಗೆ ಆರೋಗ್ಯ ಕಿಟ್ ಪೂರೈಸಲಾಗುವುದು. ಆರೋಗ್ಯ ಕಿಟ್ ಕೆಳಗಿನ ವಸ್ತುಗಳನ್ನು ಒಳಗೊಂಡಿರುತ್ತದೆ.

| ವಸ್ತುಗಳು | ಪ್ರಮಾಣ | ಉದ್ದೇಶ |
|---|---|---|
| ಪಲ್ಸ್ ಆಕ್ಸಿಮೀಟರ್ | 2 | ಆಮ್ಲಜನಕದ ಶುದ್ಧತ್ವವನ್ನು ಮೇಲ್ವಿಚಾರಣೆ ಮಾಡಲು (SpO2) |
| ಇನ್ಫ್ರಾರೆಡ್ ಥರ್ಮಾಮೀಟರ್ | 2 | ತಾಪಮಾನವನ್ನು ಮೇಲ್ವಿಚಾರಣೆ |
| ಡಿಜಿಟಲ್ ಬಿ.ಪಿ. ಉಪಕರಣ | 1 | ರಕ್ತದೊತ್ತಡವನ್ನುಅಳೆಯಲು (ಅಧಿಕ ರಕ್ತದೊತ್ತಡ) |
| ಗ್ಲುಕೋಮೀಟರ್ | 1 | ರಕ್ತದಲ್ಲಿನ ಗ್ಲೂಕೋಸನ್ನುಅಳೆಯಲು (ಡಯಾಬಿಟಿಸ್ಮೆಲ್ಲಿಟಸ್) |
| ಗ್ಲುಕೋಮೀಟರ್ ಪಟ್ಟಿಗಳು | 100 | ರಕ್ತದಲ್ಲಿನ ಗ್ಲೂಕೋಸ್ ಅಳೆಯಲು |
| ಹಿಮೋಗ್ಲೋಬಿನೋಮೀಟರ್ | 1 | ಹಿಮೋಗ್ಲೋಬಿನ್ (ರಕ್ತಹೀನತೆ) ಅಳೆಯಲು |

| | | |
|---|---|---|
| ಹಿಮೋಗ್ಲೋಬಿನೋ ಮೀಟರ್ ಪಟ್ಟಿಗಳು | 25 | ಹಿಮೋಗ್ಲೋಬಿನ್‌ಅನ್ನುಅಳೆಯಲು |
| ತೋಳಿನ ಮಧ್ಯದ ಮೇಲಿನ ಸುತ್ತಳತೆ (MUAC) ಟೇಪ್ | 1 | ಮಕ್ಕಳಲ್ಲಿ ಮಧ್ಯ-ತೋಳಿನ ಸುತ್ತಳತೆಯನ್ನು ಅಳೆಯಲು (ಅಪೌಷ್ಟಿಕತೆ) |
| ಡಿಜಿಟಲ್ ತೂಕದ ಯಂತ್ರ | 1 | ತೂಕವನ್ನುಅಳೆಯಲು |
| ಸ್ಟೇಡಿಯೋಮೀಟರ್ | 1 | ಎತ್ತರವನ್ನುಅಳೆಯಲು |
| BMI ಚಾರ್ಟ್‌ಗಳುಮತ್ತುಅಪ್ಲಿಕೇಶನ್ | 1 | ವಯಸ್ಕರಲ್ಲಿ BMI ಅನ್ನುಲೆಕ್ಕಹಾಕಲು (ಅಪೌಷ್ಟಿಕತೆ, ಬೊಜ್ಜುಇತ್ಯಾದಿ) |
| COVID ಸೂಕ್ತ ನಡವಳಿಕೆಗಳ ಕುರಿತಾದ ಐಇಸಿ ವಸ್ತುಗಳ ಪ್ಯಾಕೇಜ್, ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ನಿಭಾಯಿಸುವುದು ಮತ್ತು COVID-19 ನಲ್ಲಿನ FAQ ಗಳನ್ನು ಕಿಟ್‌ನಲ್ಲಿ ನೀಡಲಾಗುವುದು. | | |

ಕಳೆದ ಸಾಲಿನಲ್ಲಿ ಪ್ರಾರಂಬಿಸಲಾದ 14 ಜಿಲ್ಲೆಗಳ 2816 ಗ್ರಾಮ ಪಂಚಾಯಿತಿಗಳಿಗೆ KHPTಯಿಂದ ಈಗಾಗಲೇ ಆರೋಗ್ಯ ಕಿಟ್ ಗಳನ್ನು ಪೂರೈಸಲಾಗಿದೆ. ಉಪಭೋಗ್ಯ ವಸ್ತುಗಳನ್ನು **(ಗ್ಲುಕೋಮೀಟರ, ಸ್ಟ್ರಿಪ್ಸ್, ಹಿಮೋಗ್ಲೋಬಿನೋ ಮೀಟರ್ ,ಸ್ಟ್ರಿಪ್ಸ್, ಉಪಕರಣಗಳಿಗೆ ಬದಲಾಯಿಸಬಹುದಾದ ಬ್ಯಾಟರಿಗಳು)** ಸಂಖ್ಯೆ ತಗ್ಗಿದಾಗ ಈ ಹಿಂದೆ ನೀಡಲಾದ ನಿರ್ದೇಶನಗಳನ್ವಯ ಮತ್ತು ನಿಯಮಾನುಸಾರ ಗ್ರಾಮ ಪಂಚಾಯಿತಿಯು 15ನೇ ಹಣಕಾಸಿನ ಆಯೋಗದ ಅನುದಾನ ಮತ್ತು ಲಭ್ಯವಿರುವ ಸ್ವಂತ ಅನುದಾನ ಅಥವಾ ಸ್ಥಳೀಯದೇಣಿಗೆ ದಾರರ ಸಹಾಯದಿಂದ ಕಿಟ್ ನ ಉಪಭೋಗ್ಯ ವಸ್ತುಗಳನ್ನು ವ್ಯವಸ್ಥೆ ಮಾಡಲು ಅಗತ್ಯ ಕ್ರಮವಹಿಸುವುದು.17 ಜಿಲ್ಲೆಗಳ 3146 ಗ್ರಾಮ ಪಂಚಾಯಿತಿಗಳಿಗೆ ಉಪಭೋಗ್ಯ ವಸ್ತುಗಳೊಂದಿಗೆ ಆರೋಗ್ಯ ಕಿಟ್ ಒದಗಿಸಲು ನಿರ್ದೇಶನ ನೀಡಲಾಗುವುದು. ಉಪಭೋಗ್ಯ ವಸ್ತುಗಳನ್ನು (ಗ್ಲುಕೋಮೀಟರಸ್ಟ್ರಿಪ್ಸ್, ಹಿಮೋಗ್ಲೋಬಿನೋಮೀಟರ್ ಸ್ಟ್ರಿಪ್ಸ್, ಉಪಕರಣಗಳಿಗೆ ಬದಲಾಯಿಸಬಹುದಾದ ಬ್ಯಾಟರಿಗಳು) ಸಂಖ್ಯೆ ತಗ್ಗಿದಾಗ ಗ್ರಾಮ ಪಂಚಾಯಿತಿಯು ಉಪಭೋಗ್ಯ ವಸ್ತುಗಳ ವ್ಯವಸ್ಥೆಗೆ ಮೇಲೆ ತಿಳಿಸಿರುವಂತೆ ಕ್ರಮವಹಿಸುವುದು.

**ಸೂಕ್ಷ್ಮಯೋಜನೆ:**ಗ್ರಾಮ ಪಂಚಾಯಿತಿಯಿಂದ ಕಾರ್ಯಪಡೆಯ ಮೂಲಕ ವಿವಿಧ ಇಲಾಖೆಗಳ ಸ್ಥಳೀಯ ಅಧಿಕಾರಿ/ಸಿಬ್ಬಂದಿಗಳ ಸಹ ಬಾಗಿತ್ವದಲ್ಲಿ ಆರೋಗ್ಯಕಿಟ್ ಬಳಸಿ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲು ಅಗತ್ಯ ಕಾರ್ಯತಂತ್ರದೊಂದಿಗೆ ಸೂಕ್ಷ್ಮ ಯೋಜನೆಯನ್ನು ರೂಪಿಸುವುದು. ಗ್ರಾಮ ಪಂಚಾಯಿತಿಯಿಂದ ಸೂಕ್ಷ್ಮಯೋಜನೆಯನ್ನು ತಯಾರಿಸಲು ಸೂಕ್ಷ್ಮ ಯೋಜನೆಯ ಮಾದರಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿದೆ. **(ಅನುಬಂಧ: ಗ್ರಾಮ ಪಂಚಾಯಿತಿ ಆರೋಗ್ಯಅಮೃತ ಅಭಿಯಾನದ ಸೂಕ್ಷ್ಮಯೋಜನೆ)**

**3.2.ಸಹಿತ ಕೇರ್‌ಲೈನ್:** ಅಭಿಯಾನದ ಅಡಿಯಲ್ಲಿ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ **'ಸಹಿತ' ಕೇರ್‌ಲೈನ್** ಮೂಲಕ ಸ್ಪಂದಿಸಿ ಪರಿಹಾರಗಳನ್ನು ಸೂಚಿಸಲಾಗುವುದು. ಸಹಿತಕೇರ್ ಲೈನ್ ಸಂಖ್ಯೆ 18005234600ಗೆ ಕರೆ ಮಾಡಿದವರಿಗೆ ಆಪ್ತಸಮಾಲೋಚಕರು ಕರೆ ಮಾಡಿ ಸಮಸ್ಯೆಯನ್ನು ಗುರುತಿಸುವರು. ಸಾಮಾನ್ಯ ಸಮಸ್ಯೆಗಳನ್ನು ಆಪ್ತ ಸಮಾಲೋಚನೆ ಮೂಲಕ ಪರಿಹರಿಸಲಾಗುವುದು. ಹೆಚ್ಚಿನ ಆಪ್ತ ಸಮಾಲೋಚನೆ/ಚಿಕಿತ್ಸೆ ಅವಶ್ಯಕತೆ ಇರುವವರನ್ನು ಮಾನಸಿಕ ತಜ್ಞರಿಗೆ ಶಿಫಾರಸ್ಸು ಮಾಡಲಾಗುವುದು ಹಾಗೂ ಶಿಫಾರಸ್ಸು ಮಾಡಲಾದವರ ಅನುಸರಣೆ ಮಾಡಿ ಸೇವೆ ಪಡೆದಿರುವುದನ್ನು ಖಾತರಿಪಡಿಸಿಕೊಳ್ಳಲಾಗುವುದು.

**3.3.ತರಬೇತಿ:** ಆರೋಗ್ಯ ಕಿಟ್ ಬಳಕೆಯ ಬಗ್ಗೆ ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳಿಗೆ, ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರಿಗೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ, ಸಮುದಾಯ ಆರೋಗ್ಯ ಅಧಿಕಾರಿ, ಆಶಾ ಮೇಲ್ವಿಚಾರಕರು, ಆಶಾ ಕಾರ್ಯಕರ್ತೆಯರುಗಳು, ಅಂಗನವಾಡಿ ಮೇಲ್ವಿಚಾರಕಿಯರು, ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಪಂಚಾಯಿತಿ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗುವುದು. ತರಬೇತಿಯ ದಿನಾಂಕವನ್ನು ಮತ್ತು ವಿವರಗಳನ್ನು ಮುಂಚಿತವಾಗಿ ತಿಳಿಸಲಾಗುವುದು, ಅದರಂತೆ ಎಲ್ಲರೂ ತರಬೇತಿಯಲ್ಲಿ ಭಾಗವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳು ಸೂಕ್ತ ಕ್ರಮವಹಿಸುವುದು.

4. **ಅಭಿಯಾನದ ಅನುಷ್ಠಾನದ ಜವಾಬ್ದಾರಿಗಳು:** ಅಭಿಯಾನದ ಪರಿಣಾಮಕಾರಿ ಅನುಷ್ಠಾನ ಹಾಗೂ ವರದಿಯನ್ನು ಮಾಡುವ ಕುರಿತಂತೆ ಈ ಕೆಳಕಂಡ ಜವಾಬ್ದಾರಿಗಳನ್ನು ನಿರ್ವಹಿಸುವುದು.

**4.1.ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕರ್ತವ್ಯಗಳು:** ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕಾರ್ಯಪಡೆಗಳಿಂದ ಕೋವಿಡ್

ಆರೋಗ್ಯ ಕಿಟ್‌ಅನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಹಾಗೂ ಅಭಿಯಾನದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಂಬಂಧಿಸಿದಂತೆ ಈ ಕೆಳಗಿನ ಜವಾಬ್ದಾರಿಗಳನ್ನು ನಿರ್ವಹಿಸುವುದು.

- ❖ ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಿಲ್ಲಾಪಂಚಾಯತಿ/ ತಾಲ್ಲೂಕು ಪಂಚಾಯತಿ / ಗ್ರಾಮ ಪಂಚಾಯಿತಿ ಮಟ್ಟದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಅಭಿಯಾನದ ಅನುಷ್ಠಾನಕ್ಕೆ ಸಂಬಂಧಿಸಿದಂತೆ,
    - ಪ್ರತೀ ತಿಂಗಳು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸೂಕ್ಷ್ಮ ಯೋಜನೆ ತಯಾರಿಸುವುದು ಮತ್ತು ಅದನ್ನು ಅನುಷ್ಠಾನಿಸುವುದು.
    - ನಿಯೋಜಿತ ಸಿಬ್ಬಂದಿ ತಪಾಸಣಾ ವರದಿಯನ್ನು ತಯಾರಿಸಿ ಗ್ರಾಮ ಪಂಚಾಯಿತಿಗೆ ಸಲ್ಲಿಸುವುದು.
    - ಪಂಚತಂತ್ರ ತಂತ್ರಾಂಶದಲ್ಲಿ ಅಪ್ ಲೋಡ್ ಮಾಡುವುದು.
    - ಶಿಫಾರಸ್ಸು ಸೇವೆಗಳನ್ನು ಸಮನ್ವಯ ಗೊಳಿಸುವುದು.
    - ಉಸ್ತುವಾರಿ ಮಾಡುವ ಕಾರ್ಯಗಳನ್ನು ಕೈಗೊಳ್ಳುವಂತೆ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಮತ್ತು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ನಿರ್ದೇಶನ ನೀಡುವುದು.
    - ಮಾಸಿಕ ಪ್ರಗತಿ ಪರಿಶೀಲನೆ ಕೈಗೊಳ್ಳುವುದು.
- ❖ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ಗ್ರಾಮ ಪಂಚಾಯಿತಿ ಕಾರ್ಯಪಡೆಗೆ ಕಿಟ್‌ಗಳನ್ನು ವಿತರಿಸುವುದು.
- ❖ ಅಭಿಯಾನದ ಅನುಷ್ಠಾನದ ಕುರಿತು ಹಾಗೂ ಕಿಟ್ ಬಳಕೆಯ ಕುರಿತಂತೆ ಕಾರ್ಯಪಡೆಯ ಸದಸ್ಯರು ಸೇರಿದಂತೆ ಸಂಬಂಧಿಸಿದ ಎಲ್ಲರಿಗೂ ತರಬೇತಿ ಆಗಿರುವುದನ್ನು ಖಾತರಿಪಡಿಸಿಕೊಳ್ಳುವುದು.
- ❖ KHPTಯಿಂದ ಅಭಿಯಾನದ ತಾಂತ್ರಿಕ ಬೆಂಬಲಕ್ಕಾಗಿ ನಿಯೋಜಿಸಲಾಗುವ ಜಿಲ್ಲಾ ಸಂಯೋಜಕರಿಗೆ ಜಿಲ್ಲಾ ಪಂಚಾಯಿತಿಯಿಂದ ಕಾರ್ಯನಿರ್ವಹಿಸಲು ಸ್ಥಳವಕಾಶ ನೀಡುವುದು.
- ❖ ಸೂಕ್ತ ಮಾರ್ಗದರ್ಶನದೊಂದಿಗೆ ಅಭಿಯಾನದ ಅನುಷ್ಠಾನ ಮತ್ತು ಮಾಸಿಕ ಪ್ರಗತಿ ಸಭೆ ನಡೆಸಲು ತಾಂತ್ರಿಕ ಬೆಂಬಲ ಪಡೆಯುವುದು.

- ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಪ್ರತಿ ತಿಂಗಳು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಜೊತೆ ಪ್ರಗತಿ ಪರಿಶೀಲನೆ ಸಭೆ ನಡೆಸುವಂತೆ ಹಾಗೂ ಪ್ರಗತಿ ವರದಿಯನ್ನು ಜಿಲ್ಲಾ ಪಂಚಾಯಿತಿಗೆ ಸಲ್ಲಿಸಲು ನಿರ್ದೇಶಿಸುವುದು.
- ಜಿಲ್ಲಾ ಮಟ್ಟದಲ್ಲಿ ವರದಿಯನ್ನು ಕ್ರೋಡೀಕರಿಸಿ ಪಂಚಾಯತ್ ರಾಜ್ ಆಯುಕ್ತಾಲಯಕ್ಕೆ ಸಲ್ಲಿಸುವುದು.
- ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಮಟ್ಟದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಅಭಿಯಾನಕ್ಕೆ ಪೂರ್ಣ ಬೆಂಬಲ ನೀಡುವಂತೆ ಜಿಲ್ಲಾಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಂದ ಸೂಕ್ತ ನಿರ್ದೇಶನ ಹೊರಡಿಸಲು ಕ್ರಮ ವಹಿಸುವುದು.
- ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಮಟ್ಟದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಅಭಿಯಾನಕ್ಕೆ ಪೂರ್ಣ ಬೆಂಬಲ ನೀಡುವಂತೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರಿಂದ ಸೂಕ್ತ ನಿರ್ದೇಶನ ಹೊರಡಿಸಲು ಕ್ರಮವಹಿಸುವುದು.
- ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತಮಗೆ ವಹಿಸಲಾದ ಜವಾಬ್ದಾರಿಗಳನ್ನು ನಿರ್ವಹಿಸಲು ಸೂಕ್ತ ಸಲಹೆ, ಮಾರ್ಗದರ್ಶನ ನೀಡುವುದು.
- ಉಪಭೋಗ್ಯ ವಸ್ತುಗಳ ಪೂರೈಕೆಯಲ್ಲಿ ಆಡಳಿತಾತ್ಮಕ ಅಥವಾ ಹಣಕಾಸಿನ ಸಮಸ್ಯೆಗಳಿದ್ದಲ್ಲಿ ಪರಿಹರಿಸುವುದು.

**4.2 . ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಕರ್ತವ್ಯಗಳು:**

- ತಮ್ಮ ತಾಲ್ಲೂಕಿನಲ್ಲಿನ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಆರೋಗ್ಯ ಕಿಟ್ ಅನ್ನು ತಲುಪಿಸಲು ಕ್ರಮವಹಿಸುವುದು.
- ಅಭಿಯಾನದ ಅನುಷ್ಠಾನ ಮತ್ತು ಆರೋಗ್ಯ ಕಿಟ್ ಗಳ ಬಳಕೆಯ ಬಗ್ಗೆ ನೀಡಲಾಗುವ ತರಬೇತಿಗೆ ಗ್ರಾಮ ಪಂಚಾಯಿತಿಗಳಿಂದ ಪೂರ್ವ ತಯಾರಿಗೆ ನಿರ್ದೇಶನ ನೀಡುವುದು.
- ಅಭಿಯಾನದ ಅನುಷ್ಠಾನ ಮತ್ತು ಆರೋಗ್ಯ ಕಿಟ್ ಬಳಕೆಯ ಬಗ್ಗೆ ನೀಡಲಾಗುವ ತರಬೇತಿಗೆ ಸಂಬಂಧಿಸಿದವರು ಹಾಜರಾಗಿ ತರಬೇತಿಯನ್ನು ಪಡೆಯುವಂತೆ ಕ್ರಮವಹಿಸುವುದು.
- ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು, ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರುಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಿಬ್ಬಂದಿಯವರು,

ಅಂಗನವಾಡಿ ಮೇಲ್ವಿಚಾರಕಿಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಪಂಚಾಯಿತಿ ಸಿಬ್ಬಂದಿಗಳು ತರಬೇತಿಯನ್ನು ಪಡೆಯುವಂತೆ ಕ್ರಮ ವಹಿಸುವುದು.

- ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ಇವರಿಂದ ಆಯೋಜಿಸಲಾಗುವ ತರಬೇತಿ ಕಾರ್ಯಕ್ರಮಗಳಿಗೆ ಪೂರ್ಣ ಸಹಕಾರ ನೀಡುವುದು.
- ಗ್ರಾಮ ಪಂಚಾಯಿತಿಗಳು ಪ್ರತಿ ತಿಂಗಳು ಸೂಕ್ಷ್ಮ ಯೋಜನೆಯನ್ನು ಸಿದ್ಧಪಡಿಸುವುದು, ಪುನರಾವರ್ತನೆಯಾಗದಂತೆ ಹಾಗೂ ನಿಗದಿತ ಕಾಲಾವಧಿಯಂತೆ ಆರೋಗ್ಯ ಶಿಬಿರಗಳನ್ನು ಹಮ್ಮಿಕೊಳ್ಳುವುದನ್ನು ಖಾತರಿಪಡಿಸಿಕೊಳ್ಳುವುದು.
- ಅನುಬಂಧದಲ್ಲಿ ನೀಡಲಾದ ಸೂಕ್ಷ್ಮ ಯೋಜನೆಯಲ್ಲಿ ವಿವರಿಸಿದಂತೆ ಉದ್ದೇಶಿತ ಗುಂಪುಗಳ ಸ್ಕ್ರೀನಿಂಗ್ ವಿವರಗಳನ್ನು ದಾಖಲಿಸಿ ವರದಿಯನ್ನು ಗ್ರಾಮ ಪಂಚಾಯಿತಿಗೆ ನೀಡುವುದು.
- ಡಾಟಾ ಎಂಟ್ರಿ ಆಪರೇಟರ್ ಮೂಲಕ ಪ್ರತಿ ತಿಂಗಳು ಪಂಚತಂತ್ರ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವುದು ಹಾಗೂ ನಿಗದಿತ ನಮೂನೆಯಲ್ಲಿ ತಾಲ್ಲೂಕು ಪಂಚಾಯಿತಿಗೆ ವರದಿಯನ್ನು ಸಲ್ಲಿಸುವಂತೆ ಖಾತರಿಪಡಿಸಿಕೊಳ್ಳುವುದು.
- ಉಪಕರಣಗಳ ಉಪಯೋಗಕ್ಕೆ ಅಗತ್ಯವಾದ ಉಪ ಭೋಗ್ಯ ವಸ್ತುಗಳ ಸಂಖ್ಯೆ ತಗ್ಗಿದಾಗ , ಗ್ರಾಮ ಪಂಚಾಯಿತಿಯು ನಿಯಮಾನುಸಾರ 15ನೇ ಹಣಕಾಸಿನ ಆಯೋಗದ ಅನುದಾನ ಮತ್ತು ಲಭ್ಯವಿರುವ ಸ್ಥಳೀಯ ಅನುದಾನವನ್ನು ಬಳಸಿ ಅಥವಾ ಸ್ಥಳೀಯ ದೇಣಿಗೆಯ ಸಹಾಯದಿಂದ ವ್ಯವಸ್ಥೆ ಮಾಡಲು ಅಗತ್ಯ ಕ್ರಮ ವಹಿಸುವುದು.
- ಅಭಿಯಾನದ ಪ್ರಗತಿಯ ಕುರಿತು ಪ್ರತಿ ತಿಂಗಳು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಜೊತೆ ಪ್ರಗತಿ ಪರಿಶೀಲನೆ ಸಭೆ ನಡೆಸುವುದು ಹಾಗೂ ಪ್ರಗತಿ ವರದಿಯನ್ನು ಜಿಲ್ಲಾ ಪಂಚಾಯಿತಿಗೆ ಸಲ್ಲಿಸುವುದು.
- KHPTಯಿಂದ ಅಭಿಯಾನದ ತಾಂತ್ರಿಕ ಬೆಂಬಲಕ್ಕಾಗಿ ನಿಯೋಜಿಸಲಾಗುವ ತಾಲ್ಲೂಕು ಸಂಯೋಜಕರಿಗೆ ತಾಲ್ಲೂಕು ಪಂಚಾಯಿತಿಯಿಂದ ಕಾರ್ಯನಿರ್ವಹಿಸಲು ಸ್ಥಳವಕಾಶ ನೀಡುವುದು.
- ತಾಲ್ಲೂಕು ಸಂಯೋಜಕರಿಂದ ಅಭಿಯಾನದ ಅನುಷ್ಠಾನ ಮತ್ತು ಪ್ರಗತಿಯ ಕುರಿತು ಪ್ರತಿ ತಿಂಗಳು ನಡೆಸಲಾಗುವ ಸಭೆಗಳಿಗೆ ತಾಂತ್ರಿಕ ಬೆಂಬಲ ಪಡೆಯುವುದು.
- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾಮಟ್ಟದಲ್ಲಿ ಆಯೋಜಿಸುವ ಪ್ರಗತಿ ಪರಿಶೀಲನಾ ಸಭೆಯಲ್ಲಿ ತಾಲ್ಲೂಕು ಸಂಯೋಜಕರೊಂದಿಗೆ ಭಾಗವಹಿಸುವುದು.

**4.3. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕರ್ತವ್ಯಗಳು:**

- ❖ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಕಾರ್ಯಪಡೆಯ ಪ್ರತಿನಿಧಿಗಳ ತಂಡದ ಮೂಲಕ ತಾಲ್ಲೂಕು ಪಂಚಾಯಿತಿಯಿಂದ ಆರೋಗ್ಯ ಕಿಟ್ ನ್ನು ಪಡೆಯಲು ಕ್ರಮ ವಹಿಸುವುದು.
- ❖ ಆರೋಗ್ಯ ಕಿಟ್ ಉಸ್ತುವಾರಿ ವಹಿಸುವುದು ಅಥವಾ ಗ್ರಾಮ ಪಂಚಾಯಿತಿಯ ತಮ್ಮ ಅಧೀನ ಅಧಿಕಾರಿಗೆ ಜವಾಬ್ದಾರಿಯನ್ನು ವಹಿಸುವುದು.
- ❖ ಆರೋಗ್ಯ ಕಿಟ್ ಸುರಕ್ಷಿತವಾಗಿರುವಂತೆ ಹಾಗೂ ಸೂಕ್ತ ರೀತಿಯಲ್ಲಿ ಬಳಕೆಯಾಗುವುದನ್ನು ಖಾತರಿಪಡಿಸಿಕೊಳ್ಳುವುದು.
- ❖ ತಮ್ಮ ಗ್ರಾಮ ಪಂಚಾಯಿತಿಯಲ್ಲಿ ಅಭಿಯಾನದ ಅನುಷ್ಠಾನಕ್ಕೆ ಪೂರ್ವ ತಯಾರಿ ಮಾಡಿಕೊಳ್ಳುವುದು.
- ❖ ರಾಜ್ಯದಿಂದ ಸೂಚಿಸಲಾಗುವ ದಿನಾಂಕದಂದು ಆರೋಗ್ಯ ವಿಶೇಷ ಗ್ರಾಮ ಸಭೆಯನ್ನು ಆಯೋಜಿಸುವುದು.
- ❖ ಈ ಸಭೆಯಲ್ಲಿ ಆರೋಗ್ಯದ ಮಹತ್ವ ಮತ್ತು ಅಭಿಯಾನದ ಕುರಿತು ಜನರಲ್ಲಿ ಅರಿವು ಮೂಡಿಸಲು ಹಾಗೂ ಅಭಿಯಾನದ ಚಾಲನೆಗೆ ಸೂಕ್ತ ಕ್ರಮವಹಿಸುವುದು.
- ❖ ಅಭಿಯಾನದ ಅನುಷ್ಠಾನ ಮತ್ತು ಆರೋಗ್ಯ ಕಿಟ್ ಬಳಕೆಯ ಬಗ್ಗೆ ನೀಡಲಾಗುವ ತರಬೇತಿಗೆ ಗ್ರಾಮ ಪಂಚಾಯಿತಿಯಿಂದ ಪೂರ್ವ ತಯಾರಿ (ತರಬೇತಿಯನ್ನು ವೀಕ್ಷಿಸಲು ಅನುಕೂಲವಾಗುವಂತೆ ಸೂಕ್ತ ಸ್ಥಳಮತ್ತುಉಪಕರಣಗಳು) ಯನ್ನುಮಾಡುವುದು.
- ❖ ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು, ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರುಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಿಬ್ಬಂದಿಯವರು, ಅಂಗನವಾಡಿ ಮೇಲ್ವಿಚಾರಕಿಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಪಂಚಾಯಿತಿ ಸಿಬ್ಬಂದಿಗಳು ತರಬೇತಿಯನ್ನು ಪಡೆಯುವಂತೆ ಕ್ರಮ ವಹಿಸುವುದು.
- ❖ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ಇವರಿಂದ ಆಯೋಜಿಸಲಾಗುವ ತರಬೇತಿ ಕಾರ್ಯಕ್ರಮಗಳಿಗೆ ಪೂರ್ಣ ಸಹಕಾರ ನೀಡುವುದು.
- ❖ ಪ್ರತಿ ತಿಂಗಳ 3ನೇ ವಾರದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ನೇತೃತ್ವದಲ್ಲಿ ಸಭೆ ಕರೆದು ಅನುಬಂಧದಲ್ಲಿ ವಿವರಿಸಿರುವಂತೆ ಸಭೆಯಲ್ಲಿ ಸೂಕ್ಷ್ಮ ಯೋಜನೆಯ ಅನುಸಾರವಾಗಿ ಉದ್ದೇಶಿತ ಗುಂಪುಗಳ ಸ್ಕ್ರೀನಿಂಗ್ ಆಯಾ ತಿಂಗಳ ಆರೋಗ್ಯ ಶಿಬಿರದ ಪ್ರಗತಿ ವರದಿ ಮತ್ತು ಅನುಸರಣಾ ವರದಿಯನ್ನು ಪರಿಶೀಲಿಸಿ ಮುಂದಿನ ತಿಂಗಳ ಸೂಕ್ಷ್ಮ ಯೋಜನೆ ತಯಾರಿಸುವುದು.

❖ ಆರೋಗ್ಯ ಶಿಬಿರದ ತಪಾಸಣಾ ವರದಿಯನ್ನು ದಾಖಲಿಸಲು ಜವಾಬ್ದಾರಿ ವಹಿಸಲಾದ ಸಿಬ್ಬಂದಿಯಿಂದ ಗ್ರಾಮ ಪಂಚಾಯಿತಿಗೆ ತಲುಪಿಸಲು ಹಾಗೂ ಗ್ರಾಮ ಪಂಚಾಯಿತಿ ಡಾಟಾ ಆಪರೇಟರ್ ಮೂಲಕ ಪಂಚತಂತ್ರ ತಂತ್ರಾಂಶದಲ್ಲಿ ಅಪ್ ಲೋಡ್ ಮಾಡಲು ಕ್ರಮವಹಿಸುವುದು.

❖ ಆರೋಗ್ಯಕಿಟ್ ಮತ್ತು ಉಪಭೋಗ್ಯ ವಸ್ತುಗಳ ದಾಸ್ತಾನು ವಹಿ ನಿರ್ವಹಿಸುವುದು ಹಾಗೂ ಬಳಕೆಯನ್ನು ಸರಿಯಾಗಿ ದಾಖಲಿಸುವುದನ್ನು ಖಾತರಿಪಡಿಸಿಕೊಳ್ಳುವುದು.

❖ ಆರೋಗ್ಯ ಕಿಟ್ ಗೆ ಮತ್ತು ಮಾನಸಿಕ ಆರೋಗ್ಯ ಸೇವೆ ಪಡೆಯಲು 'ಸಹಿತ'ಕೇರ್ ಲೈನ್ ಸಹಾಯವಾಣಿ ಸಂಖ್ಯೆ ಬಗ್ಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹೆಚ್ಚಿನ ಪ್ರಚಾರ ಮಾಡುವುದು.

❖ ಉಪಭೋಗ್ಯ ವಸ್ತುಗಳ ಸಂಖ್ಯೆ ತಗ್ಗಿದಾಗ, ನಿಯಮಾನುಸಾರ 15ನೇ ಹಣಕಾಸಿನ ಆಯೋಗದ ಅನುದಾನ ಮತ್ತು ಲಭ್ಯವಿರುವ ಸ್ಥಳೀಯ ಅನುದಾನವನ್ನು ಬಳಸಿ ಅಥವಾ ಸ್ಥಳೀಯ ದೇಣಿಗೆಯಿಂದ ಸಹಾಯದಿಂದ ವ್ಯವಸ್ಥೆ ಮಾಡಲು ಅಗತ್ಯ ಕ್ರಮ ವಹಿಸುವುದು.

❖ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ತಾಲ್ಲೂಕು ಮಟ್ಟದಲ್ಲಿ ಆಯೋಜಿಸಲಾಗುವ ಮಾಸಿಕ ಪ್ರಗತಿ ಪರಿಶೀಲನ ಸಭೆಯಲ್ಲಿ ಭಾಗವಹಿಸುವುದು.

❖ ಈ ಅಭಿಯಾನದ ಸಂಬಂಧ ಕಾಲಕಾಲಕ್ಕೆ ಇಲಾಖೆಯಿಂದ/ಸರ್ಕಾರದಿಂದ ಹೊರಡಿಸಲಾಗುವ ಆದೇಶ/ನಿರ್ದೇಶನಗಳನ್ನು ಜಾರಿಗೊಳಿಸುವುದು.

4.4. **ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್ (KHPT)ರವರ ಕರ್ತವ್ಯಗಳು:**ಕಳೆದ ಸಾಲಿನಲ್ಲಿ ಪ್ರಾರಂಭಿಸಲಾದ ಆರೋಗ್ಯ ಅಮೃತ ಅಭಿಯಾನದ 14 ಜಿಲ್ಲೆಗಳು ಹಾಗೂ ವಿಸ್ತರಿಸಲಾದ 17 ಜಿಲ್ಲೆಗಳು ಸೇರಿದಂತೆ 31 ಜಿಲ್ಲೆಗಳಲ್ಲಿ ಅಭಿಯಾನದ ಪರಿಣಾಮಕಾರಿ ಅನುಷ್ಠಾನಕ್ಕಾಗಿ KHPT ಯು ಈ ಕೆಳಕಂಡ ತಾಂತ್ರಿಕ ಬೆಂಬಲ ನೀಡುವುದು.ಅದಕ್ಕಾಗಿ ವಿಭಾಗೀಯ ಮುಖ್ಯಸ್ಥರು, ಜಿಲ್ಲಾ ಸಂಯೋಜಕರು ಮತ್ತು ತಾಲ್ಲೂಕು ಸಂಯೋಜಕರುಗಳನ್ನು ನೇಮಿಸುವುದು.

**1.** ಅಭಿಯಾನದ ಚಟುವಟಿಕೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಎಲ್ಲಾ ಭಾಗೀದಾರರ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಬಲವರ್ಧನೆ (Capacity Building)

**2.** ಆರೋಗ್ಯಕಿಟ್ ಬಳಕೆ ಮತ್ತು ಆರೋಗ್ಯ ಶಿಬಿರಗಳನ್ನು ಆಯೋಜಿಸಲು ತಾಂತ್ರಿಕ ಬೆಂಬಲ ನೀಡುವುದು.

**3.** 'ಸಹಿತ'ಕೇರ್ ಲೈನ್ ಮೂಲಕ ಮಾನಸಿಕ ಆರೋಗ್ಯಕ್ಕೆ ಬೆಂಬಲ

**4.** ಅಭಿಯಾನದ ಪರಿವೀಕ್ಷಣೆ, ವರದಿ ಮತ್ತು ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸುವುದು.

ಆರೋಗ್ಯ ಸೇವೆಗಳನ್ನು ಗ್ರಾಮೀಣ ಪ್ರದೇಶದ ಕಟ್ಟಕಡೆಯ ಸಮುದಾಯಕ್ಕೂ ತಲುಪಿಸುವ ಮಹದುದ್ದೇಶದಿಂದ ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನವನ್ನು ಅನುಷ್ಠಾನಗೊಳಿಸಲು ಮೇಲೆ ನೀಡಿದ ಮಾರ್ಗಸೂಚಿಯನ್ನು ತಪ್ಪದೆ ಪಾಲಿಸುವುದು.

**(ಉಮಾ ಮಹಾದೇವನ್)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಗೆ:**

1. ಮಹಾ ಲೇಖಪಾಲರು (ಲೆಕ್ಕಪತ್ರ /ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಕೆ.ಜಿ. ರಸ್ತೆ, ಗಾಂಧಿ ನಗರ, ಬೆಂಗಳೂರು.
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ, ಬೆಂಗಳೂರು.
4. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, 1ನೇ ಮಹಡಿ, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
5. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
6. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
7. ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು,
8. ಎಲ್ಲಾ ಜಿಲ್ಲೆಗಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, (ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರಿಂದ)
9. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್, ಬೆಂಗಳೂರು .
10. ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.
11. ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು (ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).

**ಪ್ರತಿ:**

1. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ .
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತ ರವರ ಆಪ್ತ ಕಾರ್ಯದರ್ಶಿ.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ.

6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆರವರ ಆಪ್ತ ಕಾರ್ಯದರ್ಶಿ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ.
8. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
9. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
10. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

# ಅನುಬಂಧ

## ಕ್ಷಯ ಮುಕ್ತ ಗ್ರಾಮ ಪಂಚಾಯಿತಿ- ಅಪೌಷ್ಟಿಕತೆ ಮುಕ್ತ ಗ್ರಾಮ ಪಂಚಾಯಿತಿ-ರಕ್ತಹೀನತೆ ಮುಕ್ತ ಗ್ರಾಮ ಪಂಚಾಯಿತಿ

2021-22 ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಯಿಂದ ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್ (KHPT) ಸಹಯೋಗದೊಂದಿಗೆ ಕೋವಿಡ್ ಸಂದರ್ಭದಲ್ಲಿ 14 ಜಿಲ್ಲೆಯ 114 ತಾಲ್ಲೂಕಿನ 2816 ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮಪಂಚಾಯಿತಿ ಆರೋಗ್ಯ ಅಮೃತ ಅಭಿಯಾನವನ್ನುಅನುಷ್ಠಾನಗೊಳಿಸಲಾಯಿತು.

ಆರೋಗ್ಯ ಅಮೃತ ಅಭಿಯಾನದ ಮೂಲಕ ಗ್ರಾಮ ಪಂಚಾಯಿತಿ ಹಂತದಲ್ಲಿ ಆರೋಗ್ಯ ಶಿಭಿರಗಳನ್ನುಆಯೋಜಿಸಿ, ಆರೋಗ್ಯಕಿಟ್ ಬಳಸಿ ಸ್ಥಳೀಯವಾಗಿ ಆರೋಗ್ಯ ತಪಾಸಣೆ ಮಾಡಿ ಪ್ರಾರಂಭಿಕ ಹಂತದಲ್ಲಿ ಆರೋಗ್ಯ ಲಕ್ಷಣಗಳನ್ನು ಪತ್ತೆಹಚ್ಚಿ, ಸೂಕ್ತಚಿಕಿತ್ಸೆಗೆ ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಳುಹಿಸಲಾಗುತ್ತಿತ್ತು. ನಮ್ಮ ರಾಜ್ಯದ ಈ ಕ್ರಮವು ದೇಶದಲ್ಲಿಯೇ ಪ್ರಥಮ ಪ್ರಯತ್ನವಾಗಿದ್ದು, ಈ ಅಭಿಯಾನವು ರಾಷ್ಟ್ರ ಮಟ್ಟದಲ್ಲಿ ವಿಕೇಂದ್ರೀಕರಣ ವ್ಯವಸ್ಥೆಯ ಉತ್ತಮ ಮಾದರಿಯಾಗಲಿದೆ. ಈ ಯಶಸ್ಸನ್ನು ಪರಿಗಣಿಸಿ 2022-23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಉಳಿದ 3146 ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಪಂಚಾಯಿತಿ ಆರೋಗ್ಯ ಅಭಿಯಾನವನ್ನು ಅನುಷ್ಠಾನಗೊಳಿಸಲು ಘೋಷಣೆ ಮಾಡಲಾಗಿದೆ. ಅಂದರೆ 2022-23ನೇ ಸಾಲಿನಿಂದ ಹಿಂದಿನ ಸಾಲಿನ 14 ಜಿಲ್ಲೆಗಳು ಮತ್ತು ಉಳಿದ 17 ಜಿಲ್ಲೆಗಳು ಸೇರಿ ರಾಜ್ಯದ 31 ಜಿಲ್ಲೆಗಳ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿಆರೋಗ್ಯ ಅಮೃತ ಅಭಿಯಾನವನ್ನುಅನುಷ್ಠಾನಗೊಳಿಸಲಾಗುವುದು.

ಗ್ರಾಮ ಪಂಚಾಯಿತಿಯಿಂದ ಕಾರ್ಯಪಡೆಯ ಮೂಲಕ ಸ್ಥಳೀಯ ಸಮುದಾಯದ ಸಹಭಾಗಿತ್ವದಲ್ಲಿ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲು ಅಗತ್ಯ ಕಾರ್ಯತಂತ್ರದೊಂದಿಗೆ ಸೂಕ್ಷ್ಮಯೋಜನೆಯನ್ನು ರೂಪಿಸುವುದು ಅಭಿಯಾನದ ಪ್ರಮುಖ ಚಟುವಟಿಕೆಯಾಗಿದೆ. ಸೂಕ್ಷ್ಮ ಯೋಜನೆಯು ಈ ಕೆಳಕಂಡ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ.

**ಅಭಿಯಾನದ ಚಟುವಟಿಕೆಗಳು:**

1. ಅಸಾಂಕ್ರಾಮಿಕ ರೋಗಗಳ ಸ್ಕ್ರೀನಿಂಗ್
2. ಟಿ.ಬಿ. ಸ್ಕ್ರೀನಿಂಗ್
3. ಅಪೌಷ್ಟಿಕತೆ
4. ರಕ್ತಹೀನತೆ
5. ಮಾನಸಿಕ ಆರೋಗ್ಯ
6. ಹದಿಹರೆಯದವರ ಸಮಸ್ಯೆಗಳು ಹಾಗೂ ಬಾಲ್ಯವಿವಾಹ ತಡೆ ಮಹಿಳಾ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆ ಕುರಿತು ಜಾಗೃತಿ ಮೂಡಿಸುವುದು.

**ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸುವ ಸ್ಥಳಗಳು:** ಅಭಿಯಾನದ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಈ ಕೆಳಕಂಡ ಸ್ಥಳಗಳಲ್ಲಿ ಪ್ರತಿ ತಿಂಗಳು ಕನಿಷ್ಟ 5 ಆರೋಗ್ಯ ತಪಾಸಣಾ ಶಿಬಿರಗಳನ್ನು ಪುನರಾವರ್ತನೆ ಆಗದಂತೆ ಆಯೋಜಿಸುವುದು.

1. ಮಾಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿನ ಕೆಲಸದ ಸ್ಥಳಗಳಲ್ಲಿ
2. ಶಾಲೆಗಳಲ್ಲಿ
3. ಅಂಗನವಾಡಿ ಕೇಂದ್ರಗಳಲ್ಲಿ
4. ವಸತಿ ಶಾಲೆ/ ವಸತಿ ನಿಲಯಗಳಲ್ಲಿ
5. ವಾರದ ಮಾರುಕಟ್ಟೆ ಪ್ರದೇಶದಲ್ಲಿ
6. ಸ್ವಸಹಾಯ ಸಂಘಗಳ ಒಕ್ಕೂಟಗಳ ಮಾಸಿಕ ಸಭೆ ನಡೆಯುವ ಸ್ಥಳದಲ್ಲಿ
7. ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿ ಸಭೆಗಳಲ್ಲಿ
8. ಹಾಲು ಉತ್ಪಾದಕರ ಸಹಕಾರಿ ಸಂಘದ ಸಭೆಗಳಲ್ಲಿ
9. ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘದ ಸಭೆಗಳಲ್ಲಿ
10. ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ
11. ಅರ್ಹ ಜನರು ಆರೋಗ್ಯ ತಪಾಸಣೆಯಿಂದ ವಂಚಿತರಾಗದಂತೆ ತಾಂಡ/ಹಾಡಿಗಳಲ್ಲಿ, ವಲಸಿಗರ ಕ್ಯಾಂಪ್‌ಗಳು ಅಲೆಮಾರಿಗಳು ವಾಸಿಸುವ ಸ್ಥಳಗಳಲ್ಲಿ.


**ಆರೋಗ್ಯ ತಪಾಸಣೆ ಶಿಬಿರಗಳನ್ನು ಆಯೋಜಿಸಲು ಸೂಕ್ಷ್ಮ ಯೋಜನೆ**

ಸೂಕ್ಷ್ಮ ಯೋಜನೆಯನ್ನು ತಯಾರಿಸುವಾಗ ಆಯಾ ಗ್ರಾಮಗಳ ಜನಸಂಖ್ಯೆ, ಆರೋಗ್ಯ ಸ್ಥಿತಿಗತಿ, ಸಾಮಾಜಿಕ ಪರಿಸರ, ಸಮುದಾಯಕ್ಕೆ ಸೇವೆಯನ್ನು ಒದಗಿಸುತ್ತಿರುವ ಸಂಸ್ಥೆಗಳ ಅಸ್ತಿತ್ವ, ಶಾಲೆ, ಅಂಗನವಾಡಿ ಕೇಂದ್ರ, ವಸತಿ ಶಾಲೆ/ ವಸತಿ ನಿಲಯ, ಸ್ವಸಹಾಯ ಸಂಘಗಳ ಒಕ್ಕೂಟಗಳು, ಹಾಲು ಉತ್ಪಾದಕರ ಸಹಕಾರ ಸಂಘ, ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ, ಗ್ರಾಮ ಪಂಚಾಯಿತಿ ಗ್ರಂಥಾಲಯ, ಆರೋಗ್ಯ ಮತ್ತು ಕ್ಷೇಮ ಕೇಂದ್ರ ಇತ್ಯಾದಿಗಳ ಬಗ್ಗೆ ತಿಳಿದುಕೊಳ್ಳುವುದು. ನಂತರ ಆ ಗ್ರಾಮ ಪಂಚಾಯತ್ / ಗ್ರಾಮವನ್ನು **ಕ್ಷಯಮುಕ್ತ ಗ್ರಾಮ ಪಂಚಾಯಿತಿ- ಅಪೌಷ್ಠಿಕತೆ ಮುಕ್ತ ಗ್ರಾಮ ಪಂಚಾಯಿತಿ-ರಕ್ತಹೀನತೆ ಮುಕ್ತ ಗ್ರಾಮ ಪಂಚಾಯಿತಿ-ಬಾಲ್ಯವಿವಾಹ ಮುಕ್ತ ಗ್ರಾಮ ಪಂಚಾಯಿತಿಯಾಗಿ ಪರಿವರ್ತಿಸುವ** ಗುರಿಯನ್ನು ಹೊಂದುವುದು.


ಈ ಗುರಿಯನ್ನು ತಲುಪಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಇತರೆ ಇಲಾಖೆಗಳ ಸಮನ್ವಯತೆಯನ್ನು, ಆ ಇಲಾಖೆಗಳ ಕಾರ್ಯಕ್ರಮಗಳ ಒಗ್ಗೂಡಿಸುವಿಕೆಯನ್ನು ಹಾಗೂ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿಗಳ ಸಹಕಾರವನ್ನು ಒಳಗೊಂಡಂತೆ ಸೂಕ್ಷ್ಮ ಯೋಜನೆಯನ್ನು ತಯಾರಿಸುವುದು.

ಆರೋಗ್ಯತಪಾಸಣೆಗೆ ಸಂಬಂಧಿಸಿದಂತೆ ಆರೋಗ್ಯ ಸೇವೆಗಳ ಪುನರಾವರ್ತನೆ ಆಗದಂತೆ ಗ್ರಾಮ ಪಂಚಾಯಿತಿ ಮತ್ತು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು ಖಾತರಿಪಡಿಸಿಕೊಂಡು ಆಯೋಜಿಸುವುದು.

ಈ ಕೆಳಗಿನ ಚಿತ್ರದಲ್ಲಿ ಗ್ರಾಮ ಮಟ್ಟದಲ್ಲಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇರಬಹುದಾದ ವಿವಿಧ ವೇದಿಕೆಗಳನ್ನು ತೋರಿಸಲಾಗಿದೆ.




ಒಂದು ಗ್ರಾಮವಿರುವ ಗ್ರಾಮ ಪಂಚಾಯಿತಿ




**ಒಂದಕ್ಕಿಂತ ಹೆಚ್ಚಿನ ಗ್ರಾಮಗಳಿರುವ ಗ್ರಾಮ ಪಂಚಾಯಿತಿ**

# ಆರೋಗ್ಯ ತಪಾಸಣೆ ಶಿಬಿರಗಳನ್ನು ಆಯೋಜಿಸಲು ಸೂಕ್ಷ್ಮ ಯೋಜನೆ

| ಕ್ರ.ಸ | ದಿನಾಂಕ | ಸ್ಥಳ | ಮುಖ್ಯ ವೇದಿಕೆ | ಉದ್ದೇಶಿತ ಗುಂಪು | ಮುಖ್ಯ ಚಟುವಟಿಕೆಗಳು | ಆರೋಗ್ಯ ತಪಾಸಣೆ ಮಾಡುವವರು | ಶಿಬಿರದಲ್ಲಿ ದಾಖಲಾತಿ ಮಾಡಿ ವರದಿಯನ್ನು ಗ್ರಾ. ಪಂ. ಗೆ ಸಲ್ಲಿಸುವವರು | ವರದಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವವರು | ಶಿಬಿರವನ್ನು ಆಯೋಜಿಸುವ/ ಜನರನ್ನು ಕರೆ ತರುವ ಜವಾಬ್ದಾರಿ |
|---|---|---|---|---|---|---|---|---|---|
| | 1 | 2 | 3 | 4 | 5 | 6 | 7 | 8 | 9 |
| 1 | ಬಾಲ ವಿಕಾಸ ಸಮಿತಿ ಸಭೆಯ ದಿನ/ಪ್ರತಿ ತಿಂಗಳ 3ನೇ ಶನಿವಾರ ಅಥವಾ ಸಮಿತಿಯಿಂದ ನಿರ್ಣಯಿಸಲಾಗುವ ದಿನಾಂಕದಂದು (ತಿಂಗಳಲ್ಲಿ ಎರಡು ಬಾರಿ) | ಅಂಗನವಾಡಿ ಕೇಂದ್ರ | ಬಾಲವಿಕಾಸ ಸಮಿತಿ ಸಭೆ | ಗ್ರಾಮದಲ್ಲಿರುವ ಒಟ್ಟು ಗರ್ಭಿಣಿಯರು, ಕಠಿಣ ಪರಿಸ್ಥಿತಿಯಲ್ಲಿರುವ ಗರ್ಭಿಣಿಯರು ,ಬಾಣಂತಿಯರು, 0-6 ವರ್ಷದ ಮಕ್ಕಳು, ಕಡಿಮೆ ಹುಟ್ಟು ತೂಕದ ಶಿಶುಗಳು ಅಪೌಷ್ಟಿಕ ಮಕ್ಕಳು, ರೆಫರಲ್ಗಳು ,ಕಿಶೋರಿಯರು, ,ಮಹಿಳಾ ಹಿರಿಯ ನಾಗರಿಕರು, ವಿಕಲಚೇತನರು. | ಬಿಎಮ್ ಐ, ಹಿಮೋಗ್ಲೊಬಿನ್, ಬಿ. ಪಿ ಮತ್ತು ಸಕ್ಕರೆ ಕಾಯಿಲೆ ತಪಾಸಣೆ ಬಾಲ್ಯವಿವಾಹ ದುಷ್ಪರಿಣಾಮ, ಅಪೌಷ್ಟಿಕತೆ, ವೈಯಕ್ತಿಕ ಸ್ವಚ್ಚತೆ, ಮಾನಸಿಕ ಅರೋಗ್ಯ, ಮಹಿಳಾ ದೌರ್ಜನ್ಯ ಕುರಿತು ಮಾಹಿತಿ ನೀಡುವುದು. ತೊಂದರೆಗಳಿದ್ದಲ್ಲಿ ಅಪ್ತ ಸಮಾಲೋಚನೆಗೆ ಶಿಫಾರಸ್ಸು ಮಾಡುವುದು. ಟಿಬಿರೋಗಗಳ ಲಕ್ಷಣ ಕುರಿತು ಸ್ಕ್ರೀನಿಂಗ್ ಮಾಡುವುದು, ಲಕ್ಷಣಗಳಿದ್ದಲ್ಲಿ ಕಫ ಪರೀಕ್ಷೆಗೆ ಶಿಫಾರಸು ಮಾಡುವುದು | ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಮತ್ತು ಆಶಾ ಕಾರ್ಯಕರ್ತೆಯರ ಸಹಕಾರದಲ್ಲಿ ಸಮುದಾಯ ಆರೋಗ್ಯ ಅಧಿಕಾರಿ.<br><br>RBSK ತಂಡ ಬೇಟಿ ನೀಡುವ ಸಂದರ್ಭವನ್ನು ಬಳಸಿಕೊಳ್ಳುವುದು. | ಅಂಗನವಾಡಿ ಕಾರ್ಯಕರ್ತೆ | ಗ್ರಾಮ ಪಂಚಾಯಿತಿ ಡಾಟಾ ಆಪರೇಟರ್ | ಅಂಗನವಾಡಿ ಕಾರ್ಯಕರ್ತೆ /ಬಾಲ ವಿಕಾಸ ಸಮಿತಿ ಪಧಾಧಿಕಾರಿಗಳು ಮತ್ತು ಗ್ರಾಪಂ ಸಿಬ್ಬಂದಿ ಮತ್ತು ಸದಸ್ಯರು, |
| 2 | SDMC ಸಭೆನಡೆಯುವ ದಿನಾಂಕದಂದು ಅಥವಾ ಸಮಿತಿಯಿಂದನಿರ್ಣಯಿಸಲಾಗುವ | ಶಾಲೆಯಲ್ಲಿ | ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ (SDMC) ಸಭೆ. | ಮಕ್ಕಳು ಮತ್ತು ಪಾಲಕರು | ಬಿಎಮ್ ಐ, ಹಿಮೋಗ್ಲೊಬಿನ್, ಬಿ. ಪಿ ಮತ್ತು ಸಕ್ಕರೆ ಕಾಯಿಲೆ ತಪಾಸಣೆ ಬಾಲ್ಯವಿವಾಹ ದುಷ್ಪರಿಣಾಮ, ಅಪೌಷ್ಟಿಕತೆ, ವೈಯಕ್ತಿಕ ಸ್ವಚ್ಚತೆ, ಮಾನಸಿಕ ಅರೋಗ್ಯ, ಮಹಿಳಾ ದೌರ್ಜನ್ಯ ಕುರಿತು | ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಮತ್ತು ಆಶಾ ಕಾರ್ಯಕರ್ತೆಯರ ಸಹಕಾರದಲ್ಲಿ ಸಮುದಾಯ ಆರೋಗ್ಯ ಅಧಿಕಾರಿ.<br><br>RBSK ತಂಡ ಬೇಟಿ | ಶಾಲಾ ಶಿಕ್ಷಕರು | ಗ್ರಾಮ ಪಂಚಾಯಿತಿ ಡಾಟಾ ಆಪರೇಟರ್ | SDMC ಸಮಿತಿ ಸದಸ್ಯರು, ಶಿಕ್ಷಕರು ಮತ್ತು ಶಾಲಾ ಸಿಬ್ಬಂದಿಗಳು |

| | | | | | | | | | |
|---|---|---|---|---|---|---|---|---|---|
| | ದಿನಾಂಕ ದಂದು. | | | | ಮಾಹಿತಿ ನೀಡುವುದು. ತೊಂದರೆಗಳಿದ್ದಲ್ಲಿ ಅಪ್ತ ಸಮಾಲೋಚನೆಗೆ ಶಿಫಾರಸ್ಸು ಮಾಡುವುದು. ಟಿಬಿರೋಗಗಳ ಲಕ್ಷಣ ಕುರಿತು ಸ್ಕ್ರೀನಿಂಗ್ ಮಾಡುವುದು, ಲಕ್ಷಣಗಳಿದ್ದಲ್ಲಿ ಕಫ ಪರೀಕ್ಷೆಗೆ ಶಿಫಾರಸು ಮಾಡುವುದು | ನೀಡುವ ಸಂದರ್ಭವನ್ನು ಬಳಸಿಕೊಳ್ಳುವುದು. | | | |
| 3 | VHSNC ಸಮಿತಿ ಸಭೆಯದಿನ ಅಥವಾ ಸಮಿತಿಯಿಂದನಿರ್ಣಯಿಸಲಾದದಿನಾಂಕದಂದು | ಸಮುದಾಯ ಭವನ | ಗ್ರಾಮಆರೋಗ್ಯ, ನೈರ್ಮಲ್ಯ ಮತ್ತು ಪೌಷಿಕಸಮಿತಿ (VHSNC)ಸಭೆ | ಗ್ರಾಮದಲ್ಲಿರುವ ಒಟ್ಟು ಗರ್ಭಿಣಿಯರು, ಕಠಿಣ ಪರಿಸ್ಥಿತಿಯಲ್ಲಿರುವ ಗರ್ಭಿಣಿಯರು ,ಬಾಣಂತಿಯರು , 0-6 ವರ್ಷದ ಮಕ್ಕಳು, ಕಡಿಮೆ ಹುಟ್ಟು ತೂಕದ ಶಿಶುಗಳು ಅಪೌಷ್ಟಿಕ ಮಕ್ಕಳು, ರೆಫರಲ್ಗಳು , ಕಿಶೋರಿಯರು, ಹಿರಿಯನಾಗರಿಕರು, ವಿಕಲಚೇತನರು. | ಬಿಎಮ್ ಐ, ಹಿಮೋಗ್ಲೋಬಿನ್, ಬಿ. ಪಿ ಮತ್ತು ಸಕ್ಕರೆ ಕಾಯಿಲೆ ತಪಾಸಣೆ ಬಾಲ್ಯ ವಿವಾಹ ದುಷ್ಪರಿಣಾಮ, ಅಪೌಷ್ಟಿಕತೆ, ವೈಯಕ್ತಿಕ ಸ್ವಚ್ಛತೆ, ಮಾನಸಿಕ ಅರೋಗ್ಯ, ಮಹಿಳಾ ದೌರ್ಜನ್ಯ ಕುರಿತು ಮಾಹಿತಿ ನೀಡುವುದು. ತೊಂದರೆಗಳಿದ್ದಲ್ಲಿ ಅಪ್ತ ಸಮಾಲೋಚನೆಗೆ ಶಿಫಾರಸ್ಸು ಮಾಡುವುದು. ಟಿಬಿ ರೋಗಗಳ ಲಕ್ಷಣ ಕುರಿತು ಸ್ಕ್ರೀನಿಂಗ್ ಮಾಡುವುದು, ಲಕ್ಷಣಗಳಿದ್ದಲ್ಲಿ ಕಫ ಪರೀಕ್ಷೆಗೆ ಶಿಫಾರಸು ಮಾಡುವುದು | ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಮತ್ತು ಆಶಾ ಕಾರ್ಯಕರ್ತೆಯರ ಸಹಕಾರದಲ್ಲಿ ಸಮುದಾಯ ಆರೋಗ್ಯ ಅಧಿಕಾರಿ. | ಆಶಾ ಕಾರ್ಯಕರ್ತೆ | ಗ್ರಾಮ ಪಂಚಾಯಿತಿ ಡಾಟಾ ಆಪರೇಟರ್ | ಗ್ರಾಪಂ ಸಿಬ್ಬಂದಿ ಮತ್ತು ಸದಸ್ಯರು, ಅಂಗನವಾಡಿ ಕಾರ್ಯಕರ್ತೆ ಹಾಗೂ ಇತರ ಸಮಿತಿ ಸದಸ್ಯರು |
| 4 | ನರೇಗಾ ತಂಡ ದಿಂದ ನಿಗದಿಪಡಿಸಲಾದ ದಿನಾಂಕ ದಂದು. | ನರೇಗಾಕಾರ್ಯಸ್ಥಳಗಳಲ್ಲಿ | MGNREGS ಕಾರ್ಮಿಕರಿಗೆ ಆರೋಗ್ಯಶಿಬಿರ | MGNRES ಕಾರ್ಮಿಕರು | ಬಿಎಮ್ ಐ, ಹಿಮೋಗ್ಲೋಬಿನ್, ಬಿ. ಪಿ ಮತ್ತು ಸಕ್ಕರೆ ಕಾಯಿಲೆ ತಪಾಸಣೆ ಬಾಲ್ಯ ವಿವಾಹ ದುಷ್ಪರಿಣಾಮ, ಅಪೌಷ್ಟಿಕತೆ, ವೈಯಕ್ತಿಕ ಸ್ವಚ್ಛತೆ, ಮಾನಸಿಕ | ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಮತ್ತು ಆಶಾ ಕಾರ್ಯಕರ್ತೆಯರ ಸಹಕಾರದಲ್ಲಿ ಸಮುದಾಯ ಆರೋಗ್ಯ ಅಧಿಕಾರಿ. | ಆಯಾಕಾರ್ಯ ಸ್ಥಳದಕಾಯಕ ಬಂಧು | ಗ್ರಾಮ ಪಂಚಾಯಿತಿ ಡಾಟಾ ಆಪರೇಟರ್ | MGNREGS ನ ಕೆಲಸ ಸ್ಥಳದ ಉಸ್ತುವಾರಿ ಅಧಿಕಾರಿ |

| | | | | | | | | | |
|---|---|---|---|---|---|---|---|---|---|
| | | | | | ಅರೋಗ್ಯ, ಮಹಿಳಾ ದೌರ್ಜನ್ಯ ಕುರಿತು ಮಾಹಿತಿ ನೀಡುವುದು. ತೊಂದರೆಗಳಿದ್ದಲ್ಲಿ ಅಪ್ತ ಸಮಾಲೋಚನೆಗೆ ಶಿಫಾರಸ್ಸು ಮಾಡುವುದು. ಟಿಬಿ ರೋಗಗಳ ಲಕ್ಷಣ ಕುರಿತು ಸ್ಕ್ರೀನಿಂಗ್ ಮಾಡುವುದು, ಲಕ್ಷಣಗಳಿದ್ದಲ್ಲಿ ಕಫ ಪರೀಕ್ಷೆಗೆ ಶಿಫಾರಸು ಮಾಡುವುದು | | | | |
| 5 | ಪ್ರತಿ ತಿಂಗಳ ಮೊದಲ ನೇ ಮತ್ತು ನಾಲ್ಕನೇ ಬುಧವಾರ ಅಥವಾ ಒಂದು ರಜಾದಿನ ದಂದುಸಂ ಜೆಯವೇಳೆ | ವಸತಿ ಶಾಲೆ/ ವಸತಿ ನಿಲಯಗಳು | ವಸತಿ ಶಾಲೆ/ವಸತಿ ನಿಲಯಗಳು | ವಸತಿ ನಿಲಯದ ನಿವಾಸಿಗ ಳು | ಬಿ ಎಮ್ ಐ, ಹಿಮೋಗ್ಲೊಬಿನ್, ಬಿ. ಪಿ ಮತ್ತು ಸಕ್ಕರೆ ಕಾಯಿಲೆ ತಪಾಸಣೆ ಬಾಲ್ಯ ವಿವಾಹ ದುಷ್ಪರಿಣಾಮ, ಅಪೌಷ್ಠಿಕತೆ, ವೈಯಕ್ತಿಕ ಸ್ವಚ್ಚತೆ, ಮಾನಸಿಕ ಅರೋಗ್ಯ, ಮಹಿಳಾ ದೌರ್ಜನ್ಯ ಕುರಿತು ಮಾಹಿತಿ ನೀಡುವುದು. ತೊಂದರೆಗಳಿದ್ದಲ್ಲಿ ಅಪ್ತ ಸಮಾಲೋಚನೆಗೆ ಶಿಫಾರಸ್ಸು ಮಾಡುವುದು. ಟಿಬಿ ರೋಗಗಳ ಲಕ್ಷಣ ಕುರಿತು ಸ್ಕ್ರೀನಿಂಗ್ ಮಾಡುವುದು, ಲಕ್ಷಣಗಳಿದ್ದಲ್ಲಿ ಕಫ ಪರೀಕ್ಷೆಗೆ ಶಿಫಾರಸು ಮಾಡುವುದು | ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಮತ್ತು ಆಶಾಕಾರ್ಯಕರ್ತೆ ಯರ ಸಹಕಾರದಲ್ಲಿ ಸಮುದಾಯ ಆರೋಗ್ಯ ಅಧಿಕಾರಿ. | ವಸತಿ ಶಾಲೆ/ ವಸತಿ ನಿಲಯದ ಸಿಬ್ಬಂದಿ | ಗ್ರಾಮ ಪಂಚಾಯಿತಿ ಡಾಟಾ ಆಪರೇಟರ್ | ವಸತಿ ಶಾಲೆಯ /ವಸತಿ ನಿಲಯದ ಮುಖ್ಯಸ್ಥರು |

| | | | | | | | | |
|---|---|---|---|---|---|---|---|---|
| 6 | ಪ್ರತಿ ತಿಂಗಳ 2ನೇ ಶನಿವಾರ ದಂದು | ಅರೋಗ್ಯ ಮತ್ತು ಕ್ಷೇಮ ಕೇಂದ್ರಗಳು | ಗ್ರಾಮ ಆರೋಗ್ಯ ಮತ್ತು ಪೌಷ್ಟಿಕ ದಿನದ (VHND) ಸಭೆ | ಬಾಣಂತಿಯರು, ಗರ್ಬಿಣಿಯರು ಮತ್ತು ಕಿಶೋರಿಯರು | ಬಿಎಮ್ ಐ, ಹಿಮೋಗ್ಲೋಬಿನ್, ಬಿ. ಪಿ ಮತ್ತು ಸಕ್ಕರೆ ಕಾಯಿಲೆ ತಪಾಸಣೆ ಬಾಲ್ಯ ವಿವಾಹ ದುಷ್ಪರಿಣಾಮ, ಅಪೌಷ್ಟಿಕತೆ, ವೈಯಕ್ತಿಕ ಸ್ವಚ್ಛತೆ, ಮಾನಸಿಕ ಅರೋಗ್ಯ, ಮಹಿಳಾ ದೌರ್ಜನ್ಯ ಕುರಿತು ಮಾಹಿತಿ ನೀಡುವುದು. ತೊಂದರೆಗಳಿದ್ದಲ್ಲಿ ಅಪ್ತ ಸಮಾಲೋಚನೆಗೆ ಶಿಫಾರಸ್ಸು ಮಾಡುವುದು. ಟಿ.ಬಿ. ರೋಗಗಳ ಲಕ್ಷಣ ಕುರಿತು ಸ್ಕ್ರೀನಿಂಗ್ ಮಾಡುವುದು, ಲಕ್ಷಣಗಳಿದ್ದಲ್ಲಿ ಕಫ ಪರೀಕ್ಷೆಗೆ ಶಿಫಾರಸು ಮಾಡುವುದು | ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಮತ್ತು ಆಶಾ ಕಾರ್ಯಕರ್ತೆಯರ ಸಹಕಾರದಲ್ಲಿ ಸಮುದಾಯ ಆರೋಗ್ಯ ಅಧಿಕಾರಿ. | ಆಶಾ ಫೆಸಿಲಿಟೇಟರ್ | ಗ್ರಾಮ ಪಂಚಾಯಿತಿ ಡಾಟಾ ಆಪರೇಟರ್ | ಗ್ರಾ.ಪ ಅಧ್ಯಕ್ಷ್ಯರು, ಸದಸ್ಯರು, |
| 7 | ಸ್ವಸಹಾಯ ಸಂಘಗಳ ಒಕ್ಕೂಟಗಳ ಸಭೆ ನಡೆಯುವ ದಿನದಂದು (ತಿಂಗಳಲ್ಲಿ ಎರಡುಬಾರಿ) | ಸ್ವಸಹಾಯ ಸಂಘಗಳ ಒಕ್ಕೂಟ ಸಭೆ ನಡೆಯು ವಸ್ಥಳ | ಸ್ವಸಹಾಯ ಸಂಘಗಳ ಒಕ್ಕೂಟ | ಸ್ವಸಹಾಯ ಸಂಘಗಳ ಒಕ್ಕೂಟದ ಸದಸ್ಯರು | ಬಿಎಮ್ ಐ, ಹಿಮೋಗ್ಲೋಬಿನ್, ಬಿ. ಪಿ ಮತ್ತು ಸಕ್ಕರೆ ಕಾಯಿಲೆ ತಪಾಸಣೆ ಬಾಲ್ಯ ವಿವಾಹ ದುಷ್ಪರಿಣಾಮ, ಅಪೌಷ್ಟಿಕತೆ, ವೈಯಕ್ತಿಕ ಸ್ವಚ್ಛತೆ, ಮಾನಸಿಕ ಆರೋಗ್ಯ, ಮಹಿಳಾ ದೌರ್ಜನ್ಯ ಕುರಿತು ಮಾಹಿತಿ ನೀಡುವುದು. ತೊಂದರೆಗಳಿದ್ದಲ್ಲಿ ಅಪ್ತ ಸಮಾಲೋಚನೆಗೆ ಶಿಫಾರಸ್ಸು ಮಾಡುವುದು. ಟಿಬಿ ರೋಗಗಳ ಲಕ್ಷಣ ಕುರಿತು ಸ್ಕ್ರೀನಿಂಗ್ | ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಮತ್ತು ಆಶಾ ಕಾರ್ಯಕರ್ತೆಯರ ಸಹಕಾರದಲ್ಲಿ ಸಮುದಾಯ ಆರೋಗ್ಯ ಅಧಿಕಾರಿ. | ಸ್ವ ಸಹಾಯ ಸಂಘಗಳ ಪುಸ್ತಕ ನಿರ್ವಾಹಕರು (MBK) | ಗ್ರಾಮ ಪಂಚಾಯಿತಿ ಡಾಟಾ ಆಪರೇಟರ್ | ಸ್ವ ಸಹಾಯ ಸಂಘಗಳ ಒಕ್ಕೂಟದ ಪದಾಧಿಕಾರಿಗಳು |

| | | | | | | | | |
|---|---|---|---|---|---|---|---|---|
| | | | | | ಮಾಡುವುದು, ಲಕ್ಷಣಗಳಿದ್ದಲ್ಲಿ ಕಫ ಪರೀಕ್ಷೆಗೆ ಶಿಫಾರಸು' ಮಾಡುವುದು. | | | | |
| 08 | ತಿಂಗಳಲ್ಲಿ ಎರಡು ಬಾರಿ | ಅಂಗನವಾಡಿ ಕೇಂದ್ರ | ತಾಯಿಂದರ ಸಭೆ | ಅಂಗವಾಡಿ ಕೇಂದ್ರ ವ್ಯಾಪ್ತಿಯ ಒಟ್ಟು ಗರ್ಭಿಣಿಯರು ಬಾಣಂತಿಯರು ಕಿಶೋರಿಯರು ಪೌಷ್ಠಿಕ ಆಹಾರ ಅಗತ್ಯವಿರುವ ಮಹಿಳೆಯರು | ಬಿಎಮ್ ಐ, ಹಿಮೋಗ್ಲೊಬಿನ್, ಬಿ. ಪಿ ಮತ್ತು ಸಕ್ಕರೆ ಕಾಯಿಲೆ ತಪಾಸಣೆ ಬಾಲ್ಯ ವಿವಾಹ ದುಷ್ಪರಿಣಾಮ, ಅಪೌಷ್ಠಿಕತೆ, ವೈಯಕ್ತಿಕ ಸ್ವಚ್ಚತೆ, ಮಾನಸಿಕ ಆರೋಗ್ಯ, ಮಹಿಳಾ ದೌರ್ಜನ್ಯ ಕುರಿತು ಮಾಹಿತಿ ನೀಡುವುದು. ತೊಂದರೆಗಳಿದ್ದಲ್ಲಿ ಆಪ್ತ ಸಮಾಲೋಚನೆಗೆ ಶಿಫಾರಸ್ಸು ಮಾಡುವುದು. ಟಿಬಿ ರೋಗಗಳ ಲಕ್ಷಣ ಕುರಿತು ಸ್ಕ್ರೀನಿಂಗ್ ಮಾಡುವುದು, ಲಕ್ಷಣಗಳಿದ್ದಲ್ಲಿ ಕಫ ಪರೀಕ್ಷೆಗೆ ಶಿಫಾರಸು ಮಾಡುವುದು | ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಮತ್ತು ಆಶಾ ಕಾರ್ಯಕರ್ತೆಯರ ಸಹಕಾರದಲ್ಲಿ ಸಮುದಾಯ ಆರೋಗ್ಯ ಅಧಿಕಾರಿ. | ಆಶಾ ಕಾರ್ಯಕರ್ತೆ | ಗ್ರಾಮ ಪಂಚಾಯಿತಿ ಡಾಟಾ ಆಪರೇಟರ್ | ಆಶಾ ಕಾರ್ಯಕರ್ತೆ |
| 09 | ವಾರದ ಸಂತೆ ನಡೆಯುವವ ನ ದಿನ | ಸಂತೆ ನಡೆಯುವ ಸ್ಥಳ | ವಾರದ ಸಂತೆ | ಗ್ರಾಮ ನಿವಾಸಿಗಳು, ವ್ಯಾಪರಸ್ತರು ಬೇಡಿಕೆಯ ಆಧಾರದ ಮೇಲೆ | ಬಿಎಮ್ ಐ, ಹಿಮೋಗ್ಲೊಬಿನ್, ಬಿ. ಪಿ ಮತ್ತು ಸಕ್ಕರೆ ಕಾಯಿಲೆ ತಪಾಸಣೆ ಬಾಲ್ಯ ವಿವಾಹ ದುಷ್ಪರಿಣಾಮ, ಅಪೌಷ್ಠಿಕತೆ, ವೈಯಕ್ತಿಕ ಸ್ವಚ್ಚತೆ, ಮಾನಸಿಕ ಆರೋಗ್ಯ, ಮಹಿಳಾ ದೌರ್ಜನ್ಯ ಕುರಿತು ಮಾಹಿತಿ ನೀಡುವುದು. ತೊಂದರೆಗಳಿದ್ದಲ್ಲಿ ಆಪ್ತ ಸಮಾಲೋಚನೆಗೆ ಶಿಫಾರಸ್ಸು, | ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಮತ್ತು ಆಶಾ ಕಾರ್ಯಕರ್ತೆಯರ ಸಹಕಾರದಲ್ಲಿ ಸಮುದಾಯ ಆರೋಗ್ಯ ಅಧಿಕಾರಿ. | ಆಶಾ ಕಾರ್ಯಕರ್ತೆ | ಗ್ರಾಮ ಪಂಚಾಯಿತಿ ಡಾಟಾ ಆಪರೇಟರ್ | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಸಿಬ್ಬಂದಿ |

| | | | | | | | | | |
|---|---|---|---|---|---|---|---|---|---|
| | | | | | ಮಾಡುವುದು. ಟಿಬಿ ರೋಗಗಳ ಲಕ್ಷಣ ಕುರಿತು ಸ್ಕ್ರೀನಿಂಗ್ ಮಾಡುವುದು, ಲಕ್ಷಣಗಳಿದ್ದಲ್ಲಿ ಕಫ ಪರೀಕ್ಷೆಗೆ ಶಿಫಾರಸು ಮಾಡುವುದು | | | | |
| 10 | ಹಾಲು ಉತ್ಪಾದಕರ ಸಹಕಾರ ಸಂಘದ ಸಭೆಯ ದಿನದಂದು | ಹಾಲು ಉತ್ಪಾದಕರ ಸಹಕಾರ ಸಂಘದ ಕಚೇರಿ/ ಸಭೆ ನಡೆಯುವ ಸ್ಥಳ | ಹಾಲು ಉತ್ಪಾಕರ ಸಹಕಾರ ಸಂಘ | ಹಾಲು ಉತ್ಪಾದಕ ಸಹಕಾರ ಸಂಘದ ಸದಸ್ಯರು | ಬಿಎಮ್ ಐ, ಹಿಮೋಗ್ಲೊಬಿನ್, ಬಿ. ಪಿ ಮತ್ತು ಸಕ್ಕರೆ ಕಾಯಿಲೆ ತಪಾಸಣೆ ಬಾಲ್ಯ ವಿವಾಹ ದುಷ್ಪರಿಣಾಮ, ಅಪೌಷ್ಠಿಕತೆ, ವೈಯಕ್ತಿಕ ಸ್ವಚ್ಚತೆ, ಮಾನಸಿಕ ಅರೋಗ್ಯ, ಮಹಿಳಾ ದೌರ್ಜನ್ಯ ಕುರಿತು ಮಾಹಿತಿ ನೀಡುವುದು. ತೊಂದರೆಗಳಿದ್ದಲ್ಲಿ ಅಪ್ತ ಸಮಾಲೋಚನೆಗೆ ಶಿಫಾರಸ್ಸು ಮಾಡುವುದು. ಟಿಬಿ ರೋಗಗಳ ಲಕ್ಷಣ ಕುರಿತು ಸ್ಕ್ರೀನಿಂಗ್ ಮಾಡುವುದು, ಲಕ್ಷಣಗಳಿದ್ದಲ್ಲಿ ಕಫ ಪರೀಕ್ಷೆಗೆ ಶಿಫಾರಸು ಮಾಡುವುದು | ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಮತ್ತು ಆಶಾ ಕಾರ್ಯಕರ್ತೆಯರ ಸಹಕಾರದಲ್ಲಿ ಸಮುದಾಯ ಆರೋಗ್ಯ ಅಧಿಕಾರಿ. | ಹಾಲೂ ಪರೀಕ್ಷಾಕಾರ್ಯದರ್ಶಿ | ಗ್ರಾಮ ಪಂಚಾಯಿತಿ ಡಾಟಾ ಆಪರೇಟರ್ | ಹಾಲು ಉತ್ಪಾದಕ ಸಹಕಾರ ಸಂಘದ ಪದಾಧಿಕಾರಿಗಳು |
| 11 | ಕೃಷಿಪತ್ತಿನ ಸಹಕಾರ ಸಂಘದ ಸಭೆಯ ದಿನದಂದು | ಕೃಷಿ ಪತ್ತಿನ ಸಹಕಾರ ಸಂಘದ ಕಛೇರಿ/ ಸಭೆ ನಡೆಯುವ ಸ್ಥಳ | ಕೃಷಿ ಪತ್ತಿನ ಸಹಕಾರ ಸಂಘ | ಕೃಷಿಪತ್ತಿನ ಸಹಕಾರ ಸಂಘದ ಸದಸ್ಯರು | ಬಿಎಮ್ ಐ, ಹಿಮೋಗ್ಲೊಬಿನ್, ಬಿ. ಪಿ ಮತ್ತು ಸಕ್ಕರೆ ಕಾಯಿಲೆ ತಪಾಸಣೆ ಬಾಲ್ಯ ವಿವಾಹ ದುಷ್ಪರಿಣಾಮ, ಅಪೌಷ್ಠಿಕತೆ, ವೈಯಕ್ತಿಕ ಸ್ವಚ್ಚತೆ, ಮಾನಸಿಕ ಅರೋಗ್ಯ, ಮಹಿಳಾ ದೌರ್ಜನ್ಯ ಕುರಿತು | ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಮತ್ತು ಆಶಾ ಕಾರ್ಯಕರ್ತೆಯ ರ ಸಹಕಾರದಲ್ಲಿ ಸಮುದಾಯ ಆರೋಗ್ಯ ಅಧಿಕಾರಿ. | ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯದರ್ಶಿ | ಗ್ರಾಮ ಪಂಚಾಯಿತಿ ಡಾಟಾ ಆಪರೇಟರ್ | ಕೃಷಿ ಪತ್ತಿನ ಸಹಕಾರ ಸಂಘದ ಪದಾಧಿಕಾರಿಗಳು |

| | | | | | | | | | |
|---|---|---|---|---|---|---|---|---|---|
| | | | | | ಮಾಹಿತಿ ನೀಡುವುದು. ತೊಂದರೆಗಳಿದ್ದಲ್ಲಿ ಅಪ್ತ ಸಮಾಲೋಚನೆಗೆ ಶಿಫಾರಸ್ಸು ಮಾಡುವುದು. ಟಿಬಿ ರೋಗಗಳ ಲಕ್ಷಣ ಕುರಿತು ಸ್ಕ್ರೀನಿಂಗ್ ಮಾಡುವುದು, ಲಕ್ಷಣಗಳಿದ್ದಲ್ಲಿ ಕಫ ಪರೀಕ್ಷೆಗೆ ಶಿಫಾರಸು ಮಾಡುವುದು. | | | | |
| 12 | ಗ್ರಾಮ ಪಂಚಾಯಿತಿಯಿಂದ ನಿಗದಿಪಡಿಸಲಾದದಿನದಂದು (ತಿಂಗಳಲ್ಲಿ ಒಂದು ಬಾರಿ) | ಗ್ರಾಮ ಪಂಚಾಯಿತಿ ಗ್ರಂಥಾಲಯ | | ಗ್ರಾಮದಲ್ಲಿರುವ ಹಿರಿಯ ನಾಗರಿಕರು, ವಿಕಲಚೇತನರು ಹಾಗೂ ಬೇಡಿಕೆ ಆಧರಿಸಿ | ಬಿಎಮ್ ಐ, ಹಿಮೋಗ್ಲೊಬಿನ್, ಬಿ. ಪಿ ಮತ್ತು ಸಕ್ಕರೆ ಕಾಯಿಲೆ ತಪಾಸಣೆ ಬಾಲ್ಯ ವಿವಾಹ ದುಷ್ಪರಿಣಾಮ, ಅಪೌಷ್ಟಿಕತೆ, ವೈಯಕ್ತಿಕ ಸ್ವಚ್ಛತೆ, ಮಾನಸಿಕ ಅರೋಗ್ಯ, ಮಹಿಳಾ ದೌರ್ಜನ್ಯ ಕುರಿತು ಮಾಹಿತಿ ನೀಡುವುದು. ತೊಂದರೆಗಳಿದ್ದಲ್ಲಿ ಅಪ್ತ ಸಮಾಲೋಚನೆಗೆ ಶಿಫಾರಸ್ಸು ಮಾಡುವುದು. ಟಿಬಿ ರೋಗಗಳ ಲಕ್ಷಣ ಕುರಿತು ಸ್ಕ್ರೀನಿಂಗ್ ಮಾಡುವುದು, ಲಕ್ಷಣಗಳಿದ್ದಲ್ಲಿ ಕಫ ಪರೀಕ್ಷೆಗೆ ಶಿಫಾರಸು ಮಾಡುವುದು | ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಮತ್ತು ಆಶಾಕಾರ್ಯಕರ್ತೆಯ ರಸಹಕಾರದಲ್ಲಿ ಸಮುದಾಯ ಆರೋಗ್ಯ ಅಧಿಕಾರಿ. | ಗ್ರಂಥಾಲಯ ಮೇಲ್ವಿಚಾರಕರು | ಗ್ರಾಮ ಪಂಚಾಯಿತಿ ಡಾಟಾ ಆಪರೇಟರ್ | ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು (VRW) |
| 13 | ಗ್ರಾಮ ಪಂಚಾಯಿತಿ/ಗ್ರಾಮ ಆರೋಗ್ಯ ಮತ್ತು | ತಾಂಡ/ಹಾಡಿ/ ವಲಸಿಗರಕ್ಯಾಂಪ್‌ಅಲೆಮಾರಿಗಳು ವಾಸಿಸುವಸ್ಥಳ | ------ | ತಾಂಡ/ ಹಾಡಿ/ ವಲಸಿಗರ ಕ್ಯಾಂಪ್‌ನ ನಿವಾಸಿಗ | ಬಿಎಮ್ ಐ, ಹಿಮೋಗ್ಲೊಬಿನ್, ಬಿ. ಪಿ ಮತ್ತು ಸಕ್ಕರೆ ಕಾಯಿಲೆ ತಪಾಸಣೆ ಬಾಲ್ಯ ವಿವಾಹ ದುಷ್ಪರಿಣಾಮ, | ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಮತ್ತು ಆಶಾ ಕಾರ್ಯಕರ್ತೆಯರ ಸಹಕಾರದಲ್ಲಿ | ಆಶಾ ಕಾರ್ಯಕರ್ತೆ | ಗ್ರಾಮ ಪಂಚಾಯಿತಿ ಡಾಟಾ ಆಪರೇಟರ್ | ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ |

| | | | | | | | | | |
|---|---|---|---|---|---|---|---|---|---|
| | ಕ್ಷೇಮ ಕೇಂದ್ರ ನಿಗದಿಪಡಿಸಲಾದ ದಿನದಂದು (ತಿಂಗಳಲ್ಲಿ ಒಂದು ಬಾರಿ) | | | ಳು ಹಾಗೂ ಅಲೆಮಾರಿ ಸಮುದಾಯದವರು | ಅಪೌಷ್ಠಿಕತೆ, ವೈಯಕ್ತಿಕ ಸ್ವಚ್ಚತೆ, ಮಾನಸಿಕ ಆರೋಗ್ಯ, ಮಹಿಳಾ ದೌರ್ಜನ್ಯ ಕುರಿತು ಮಾಹಿತಿ ನೀಡುವುದು. ತೊಂದರೆಗಳಿದ್ದಲ್ಲಿ ಆಪ್ತ ಸಮಾಲೋಚನೆಗೆ ಶಿಫಾರಸ್ಸು ಮಾಡುವುದು. ಟಿಬಿರೋಗಗಳ ಲಕ್ಷಣ ಕುರಿತು ಸ್ಕ್ರೀನಿಂಗ್ ಮಾಡುವುದು, ಲಕ್ಷಣಗಳಿದ್ದಲ್ಲಿ ಕಫ ಪರೀಕ್ಷೆಗೆ ಶಿಫಾರಸು ಮಾಡುವುದು | ಸಮುದಾಯ ಆರೋಗ್ಯ ಅಧಿಕಾರಿ. | | | |

ಈ ಮೇಲಿನ ನಮೂನೆಯಂತೆ ಆಯಾ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಹಿಂದಿನ ತಿಂಗಳ 3ನೇ ವಾರದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ನೇತೃತ್ವದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯಪಡೆ ಸದಸ್ಯರು, ಪ್ರಾಥಮಿಕ ಅರೋಗ್ಯ ಕೇಂದ್ರ ಸಿಬ್ಬಂದಿ, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಮತ್ತು KHPT ಸಿಬ್ಬಂದಿ ಸಭೆಯಲ್ಲಿ ಆಯಾ ತಿಂಗಳ ಆರೋಗ್ಯ ಶಿಬಿರದ ಪ್ರಗತಿ ವರದಿ ಮತ್ತು ಅನುಸರಣಾ ವರದಿಯನ್ನು ಪರಿಶೀಲಿಸಿ ಮುಂದಿನ ತಿಂಗಳ ಸೂಕ್ಷ್ಮ ಯೋಜನೆ ತಯಾರಿಸುವುದು.

**ಶಿಬಿರದ ಪೂರ್ವ ತಯಾರಿ:**

- ಶಿಬಿರಗಳನ್ನು ಪುನರಾವರ್ತನೆಯಾಗದಂತೆ ಆಯೋಜಿಸುವುದು.
- ಒಮ್ಮೆಆರೋಗ್ಯ ತಪಾಸಣೆಗೊಳಗಾದವರನ್ನು ವೈದ್ಯಕೀಯ ನಿಗದಿತ ಕಾಲಾವಧಿಯ ನಂತರ ತಪಾಸಣೆ ಮಾಡುವುದು.
- ಆರೋಗ್ಯ ತಪಾಸಣೆ ನಡೆಸಲು ಸೂಕ್ತ ಸ್ಥಳವನ್ನು ನಿಗದಿಗೊಳಿಸುವುದು.
- ಶಿಬಿರವನ್ನುಆಯೋಜಿಸಲು ಮೂಲಭೂತ ಸೌಲಭ್ಯಗಳು ಇರುವುದನ್ನು ಖಾತರಿಪಡಿಸಿಕೊಳ್ಳುವುದು. (ಜನರಿಗೆ ಕುಳಿತು ಕೊಳ್ಳಲು, ಆರೋಗ್ಯ ತಪಾಸಣೆಗೆ ಪ್ರತ್ಯೇಕ ಸ್ಥಳ)
- ಶಿಬಿರದ ಸ್ಥಳ, ಸಮಯ ಕುರಿತು ಸ್ಥಳೀಯವಾಗಿ ಸಾಕಷ್ಟು ಪ್ರಚಾರ ಮಾಡುವುದು. ಧ್ವನಿ ಸುರುಳಿಯನ್ನು ತಯಾರಿಸಿ ತ್ಯಾಜ್ಯ ವಿಲೇವಾರಿ ವಾಹನಗಳ ಮೂಲಕ ಪ್ರಚಾರ ಮಾಡುವುದು.

- ಶಿಬಿರದ ಸ್ಥಳ. ಸಮಯದ ಮಾಹಿತಿಯ ವಿವರಗಳನ್ನು ಗ್ರಾಮ ಪಂಚಾಯಿತಿ ಕಚೇರಿಯ ಸೂಚನಾ ಫಲಕ ಸೇರಿದಂತೆ ಇತರೆ ಕಚೇರಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸುವುದು.
- ಶಿಬಿರ ನಡೆಸಲಾಗುವ ಸ್ಥಳದ ಮುಖ್ಯಸ್ಥರೊಂದಿಗೆ ಅಗತ್ಯ ಸಂಯೋಜನೆ ಮಾಡುವುದು.
- ಶಿಬಿರದ ಒಂದು ದಿನ ಮುಂಚಿತವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸ್ಥಳೀಯಚುನಾಯಿತ ಸದಸ್ಯರು ಸ್ಥಳಕ್ಕೆ ಬೇಟಿ ನೀಡಿ ಅಗತ್ಯ ಸ್ಥಳದ ಸ್ವಚ್ಛತೆ ಮತ್ತು ಪೂರ್ವ ತಯಾರಿಯನ್ನು ಖಾತರಿಪಡಿಸಿಕೊಳ್ಳುವುದು.
- ಆರೋಗ್ಯಕಿಟ್ ನಲ್ಲಿ ಪರಿಕರಗಳ ಉತ್ತಮ ಸ್ಥಿತಿ ಮತ್ತು ಅಗತ್ಯ ತಪಾಸಣೆಗಾಗಿ ಅಗತ್ಯವಿರುವಷ್ಟು ಉಪಭೋಗ್ಯ ವಸ್ತುಗಳು ಲಭ್ಯವಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.

**ಶಿಬಿರದ ಅವಧಿಯಲ್ಲಿ:**

- ಶಿಬಿರ ನಡೆಸಲು ಅಗತ್ಯವಿರುವ ಪ್ರಮಾಣದಲ್ಲಿ ಟೇಬಲ್, ಕುರ್ಚಿಗಳು ಇರುವಂತೆ ನೋಡಿಕೊಳ್ಳುವುದು.
- ಕುಡಿಯುವ ನೀರು ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಮಾಡುವುದು.
- ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ,ಸಮುದಾಯ ಆರೋಗ್ಯ ಅಧಿಕಾರಿ, ಆಶಾ ಮೇಲ್ವಿಚಾರಕಿಯರು, ಆಶಾ ಕಾರ್ಯಕರ್ತೆಯರ ಸಹಕಾರದಲ್ಲಿಆರೋಗ್ಯ ತಪಾಸಣೆ ನಡೆಸುವುದು ಹಾಗೂ ಹೆಚ್ಚಿನ ಚಿಕಿತ್ಸೆ ಅಗತ್ಯವಿರುವವರನ್ನು ಶಿಫಾರಸ್ಸು ಮಾಡುವುದು.
- ಉಪಭೋಗ್ಯ ವಸ್ತುಗಳ ಬಳಕೆಗೆ ಸಂಬಂಧಿಸಿದಂತೆ ವೈದ್ಯಕೀಯ ನೀತಿ/ ನಿಯಮಗಳನ್ನು ಅನುಸರಿಸುವುದು (ನಿಯಮಾನು ಸಾರಬಳಕೆ, ಮರು ಬಳಕೆಯಾಗದಂತೆ ಹಾಗೂ ಸೂಕ್ತ ರೀತಿಯಲ್ಲಿ ಬಳಕೆಯ ವಸ್ತುಗಳ ವಿಲೇವಾರಿ)
- ಶಿಬಿರವನ್ನು ಆಯೋಜಿಸಲಾಗುವ ಸ್ಥಳದ ಸಿಬ್ಬಂದಿ (ಸೂಕ್ಷ್ಮ ಯೋಜನೆಯಲ್ಲಿ ನಮೂದಿಸಿರುವಂತೆ) ಅಥವಾ ಗ್ರಾಮ ಪಂಚಾಯಿತಿಯಿಂದ ನಿರ್ಣಯಿಸಲಾದ ಸಿಬ್ಬಂದಿಯಿಂದ ತಪಾಸಣೆಗೆ ಹಾಜರಾಗುವವರ ನೋಂದಣಿ ಮಾಡಿಕೊಳ್ಳುವುದು ಹಾಗೂ ನಿಗದಿತ ನಮೂನೆ/ ಪುಸ್ತಕದಲ್ಲಿ ದಾಖಲೀಕರಣ ಮಾಡುವುದು.
- ಆರೋಗ್ಯ ಶಿಬಿರದ ನಂತರ ಶಿಬಿರದ ವರದಿಯನ್ನು ಸಿದ್ಧಪಡಿಸಿ ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲು ಗ್ರಾಮ ಪಂಚಾಯಿತಿಗೆ ಸಲ್ಲಿಸುವುದು.
- ಆರೋಗ್ಯ ತಪಾಸಣೆಯ ಸಂದರ್ಭದಲ್ಲಿ ಶಿಫಾರಸ್ಸು ಮಾಡಲಾದವರ ಅನುಸರಣೆಗೆ ಜವಾಬ್ದಾರಿಯನ್ನು ನಿಗದಿಗೊಳಿಸುವುದು. (ಗ್ರಾಮ ಪಂಚಾಯಿತಿಯಿಂದ ಸಮುದಾಯ ಆರೋಗ್ಯ ಅಧಿಕಾರಿ ಸಹಯೋಗದೊಂದಿಗೆ)

**ಶಿಬಿರದ ನಂತರ:**

- ಆರೋಗ್ಯ ತಪಾಸಣೆಯ ಶಿಬಿರದ ವರದಿಯನ್ನು ಗ್ರಾಮ ಪಂಚಾಯಿತಿ ಡಾಟಾ ಎಂಟ್ರಿ ಆಪರೇಟರ್ ರವರು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು.
- ಹೆಚ್ಚಿನ ಚಿಕಿತ್ಸೆಗೆ ಶಿಫಾರಸ್ಸು ಮಾಡಲಾದವರ ಅನುಸರಣೆ ಮತ್ತು ಸೇವೆ ದೊರೆಯುವಂತೆ ಕ್ರಮವಹಿಸುವುದು.
- ಆರೋಗ್ಯ ತಪಾಸಣೆಯ ವರದಿಯ ವಿಶ್ಲೇಷಣೆ ಹಾಗೂ ನಿಗದಿತ ಗುರಿ ಸಾಧನೆ ಬಗ್ಗೆ ಚರ್ಚಿಸಿ ಸೂಕ್ತ ಕ್ರಮಕ್ಕೆ ಮುಂದಿನ ಕಾರ್ಯತಂತ್ರ ರೂಪಿಸುವುದು.
- ಗ್ರಾಮ ಪಂಚಾಯಿತಿಯಿಂದ ಆಯೋಜಿಸಲಾಗುವ ಕೆ.ಡಿ.ಪಿ. ಸಭೆಯಲ್ಲಿ ವರದಿಯನ್ನು ಹಂಚಿಕೊಳ್ಳುವುದು ಹಾಗೂ ಸಭೆಯಲ್ಲಿ ವಿವಿಧ ಇಲಾಖೆಗಳ ಸಮನ್ವಯತೆಗೆ ಕಾರ್ಯತಂತ್ರ ರೂಪಿಸುವುದು.

**(ಉಮಾ ಮಹಾದೇವನ್)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ